KARNATAK EPIGRAPHY

(A general sketch)

IN KANNADA

OFFICE OF THE DIRECTOR OF ...
1224
30 AUG 1969
GOVT. OF MADRAS, MADRAS.

by

Vidyaratna R. S. PANCHAMUKHI, *M. A.*
Director of Kannad Research Institute (Retired)

ಕರ್ನಾಟಕದ ಶಾಸನಗಳು

(ಸಾಮಾನ್ಯ ಪರಿಚಯ)

TNSDA
01224

ಲೇಖಕರು :
ವಿದ್ಯಾರತ್ನ **ಆರ್. ಎಸ್. ಪಂಚಮುಖಿ,** ಎಂ. ಎ.
ಡಾಯರೆಕ್ಟರ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ (ರಿಟಾಯರ್ಡ)

KANNADA RESEARCH INSTITUTE, DHARWAR
1953

KARNATAK EPIGRAPHY

(A general sketch)

IN KANNADA

OFFICE OF THE DIRECTOR OF ...
30 AUG 1959
GOVT. OF MADRAS, MADRAS

by

Vidyaratna R. S. PANCHAMUKHI, *M. A.*

Director of Kannad Research Institute (Retired)

ಕರ್ನಾಟಕದ ಶಾಸನಗಳು

(ಸಾಮಾನ್ಯ ಪರಿಚಯ)

ಲೇಖಕರು :

ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.

ಡಾಯರೆಕ್ಟರ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ (ರಿಟಾಯರ್ಡ)

KANNADA RESEARCH INSTITUTE, DHARWAR

1953

ಪ್ರಕಾಶಕರು :
ಎಸ್. ಎಸ್. ಮಾಳವಾಡ ಎಂ. ಎ.
ಡಾಯರಿಕ್ಟರ ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ್,
ಧಾರವಾಡ

417.7095487
PAN

ಸಪ್ಟಂಬರ ೧೯೫೩

(೫೦೦ ಪ್ರತಿಗಳು)

ಬೆಲೆ ೦-೧೨-೦

ಮುದ್ರಕರು :
ಎಸ್. ಎಮ್. ಕುಲಕರ್ಣಿ
ಲಲಿತ ಮುದ್ರಣಾಲಯ
ಧಾರವಾಡ

INTRODUCTORY

The present brochure was planned to give a glimpse of the nature and contents of the Karnatak inscriptions in a general way mainly to the beginner in epigraphical research. In the first chapter, the antiquity of writing in India and the different classes of inscriptions found in Karnatak are dealt with. In the second, the preambles of different dynastic epigraphs—the Kadamba, Chalukya &c. are given to show the religious and political inclinations of the times. The third chapter briefly describes the extent of help derived from the study of inscriptions in reconstructing the cultural history of the land. The materials used for engraving the inscriptions and coins such as stone, copper, lead, silver, gold &c. are the subject matter of the fourth chapter, on which different kinds of inscriptions, donative, dedicative and commemorative (memorials—*Viragals* or *Sati* stones) are written. The beginning and end of compositions are also indicated by relevent extracts. In the fifth, the era and dating of inscriptions are stated according to different periods and inscriptions. The value of symbols with their numerical notation is shown in a chart which will be useful in understanding the S'aka year expressed by symbols or words. Then comes the treatment in chapter six, of the special features of the Karnatak Inscriptions : the administrative system of the *agrahara* and *nagara* villages with the Mahajanas of different numerical strength, the tertorial divisions having specific number of hamlets in them, and the several guilds exercising control over the wealth, education and health of the villages etc. Rural organisations of various descriptions functioning in different parts of India in the past appear to have derived their authority from or are based on the Dharmasastras, and the life of the people in all parts, being cast on the same mould presents striking similarity. Thus the contribution made by Karnatak is, as can be made out by its epigraphs, a clear gloss on the cultural history of India and supplements our knowledge of the greatness of Bharata Varsha in the galaxy of the nations of the world

21-9-1953
Malamaddi, Dharwar

R. S. Panchamukhi

ಅನುಕ್ರಮಣಿಕೆ

		ಪುಟ
	ಮುನ್ನುಡಿ	
೧.	ಶಾಸನಗಳ ಉಗಮ ಮತ್ತು ವಿಸ್ತಾರ	೧
೨.	ಕರ್ನಾಟಕದ ಶಾಸನಗಳ ಸಾಮಾನ್ಯ ಸ್ವರೂಪ	೬
೩.	ಶಾಸನಗಳ ಮಹತ್ವ	೧೪
೪.	ಬರೆಹದ ಪಾತ್ರಗಳು	೨೧
೫.	ಶಾಸನಗಳಲ್ಲಿ ಕಾಲವನ್ನು ಕೊಡುವ ರೀತಿ	೨೯
೬.	ಇತರ ವೈಶಿಷ್ಟ್ಯಗಳು	೩೪
೭.	ಪರಿಶಿಷ್ಟ ೧	೪೧
೮.	ಪರಿಶಿಷ್ಟ ೨	೪೪

OFFICE OF THE DIRE... 1224 30 AUG 1969 GOVT. OF MADRAS, MADRAS-

ಕರ್ನಾಟಕದ ಶಾಸನಗಳು

೧ ಶಾಸನಗಳ ಉಗಮ ಮತ್ತು ವಿಸ್ತಾರ

ಶಾಸನಗಳನ್ನು ಬರೆಯುವ ಪದ್ಧತಿಯು ಹಿಂದುಸ್ಥಾನದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಇರುವದು. ವೇದಗಳಲ್ಲಿ ಬರೆವಣಿಗೆಯ ಉಲ್ಲೇಖಗಳು ಬರುತ್ತವೆ. ಅಥರ್ವ ವೇದದ ಒಂದು ಮಂತ್ರದಲ್ಲಿ ನಿತ್ಯದ ಅಧ್ಯಯನ ಮುಗಿದ ಮೇಲೆ ವೇದದ ಹೊತ್ತಿಗೆಯನ್ನು ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟು ಜಪ್ಪಿಸಬೇಕೆಂದು ಬರೆದಿದೆ. ಇದರಿಂದ ಆ ಕಾಲದಲ್ಲಿ ವೇದ ಸಂಹಿತೆಗಳನ್ನು ಬರೆದಿಡುತ್ತಿದ್ದರೆಂದು ತಿಳಿಯಬಹುದು. ಈಗ ನಮಗೆ ಉಪಲಬ್ಧವಿದ್ದ ಅತ್ಯಂತ ಪ್ರಾಚೀನ ಬರೆಹಗಳೆಂದರೆ ಮೊಹಂಜೋದಾರೋ ಹರಪ್ಪಾಗಳ ಉತ್ಖನನಗಳಲ್ಲಿ ಸಿಕ್ಕ ಮೊಹರುಗಳ ಮೇಲಿನವು. ಅವುಗಳನ್ನು ಸರಿಯಾಗಿ ಅರ್ಥ ಹತ್ತುವಂತೆ ಯಾರೂ ಓದಿಲ್ಲ. ಅವುಗಳ ಅಕ್ಷರಗಳಾಗಲಿ, ಬರೆದಿಟ್ಟ ವಿಷಯಗಳಾಗಲಿ ಇಂಥವೇ ಎಂದು ನಿರ್ಧರಿಸಲು ಸಾಕಷ್ಟು ಹೊಂದಿಕೆಗಳು ಸಿಕ್ಕಿಲ್ಲ. ಆದರೂ ಅಲ್ಲಿಯ ಬರೆಹದಲ್ಲಿ ಕ್ರಿ. ಶ. ಪೂ. ೩ನೆಯ ಶತಮಾನದ ಅಶೋಕನ ಕಾಲದ ಬ್ರಾಹ್ಮೀ ಅಕ್ಷರಗಳ ಒತ್ತು-ದೀರ್ಘಗಳ ಸಂಜ್ಞೆಗಳ ಮೂಲರೂಪಗಳನ್ನು ಕಾಣಬಹುದೆಂದು ಲಿಪಿಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಅಶೋಕನ ಕಾಲದ ಬ್ರಾಹ್ಮೀ ಲಿಪಿಯು ಚಿತ್ರರೂಪದಲ್ಲಿರದೆ ಆಗಲೆ ಅಕ್ಷರಗಳ ಸ್ವರೂಪವನ್ನು ಹೊಂದಿತ್ತು. ಈಗ ಹಿಂದುಸ್ತಾನದಲ್ಲಿ ಅತ್ಯಂತ ಪ್ರಾಚೀನ ಲಿಪಿಯೆಂದರೆ ಬ್ರಾಹ್ಮೀ ಲಿಪಿಯು. ಇದರ ಬೆಳವಣಿಗೆಯು ಉತ್ತರ ಹಿಂದುಸ್ತಾನದಲ್ಲಿಯೂ ದಕ್ಷಿಣ ಹಿಂದುಸ್ತಾನದಲ್ಲಿಯೂ ಬೇರೆ ಬೇರೆ

ಆಕಾರಗಳಲ್ಲಿ ಆಗಿ ಕೊನೆಯಲ್ಲಿ ಔತ್ತರೇಯ ಲಿಪಿ ಮತ್ತು ದಾಕ್ಷಿಣಾತ್ಯ ಲಿಪಿ ಎಂದು ಎರಡು ಸಾಮಾನ್ಯ ಪ್ರಭೇದಗಳು ಉಂಟಾದವು. ಕರ್ನಾಟಕವು ದಕ್ಷಿಣ ಹಿಂದುಸ್ತಾನದಲ್ಲಿ ಒಂದು ಮಹತ್ವದ ಪ್ರಾಂತವಾಗಿದ್ದು ಅಲ್ಲಿ ಉಪಯೋಗಿಸಲ್ಪಟ್ಟ ಲಿಪಿಯು ದಾಕ್ಷಿಣಾತ್ಯ ಲಿಪಿ ವರ್ಗಕ್ಕೆ ಸೇರಿದ್ದು. ಕರ್ನಾಟಕದ ಶಾಸನಗಳಲ್ಲಿ ಉಪಯೋಗಿಸಲ್ಪಟ್ಟ ಲಿಪಿಯ ಸ್ವರೂಪ, ಪ್ರಕಾರ, ಪ್ರಭೇದಗಳನ್ನು ಕುರಿತು ಮುಂದೆ ಬರೆಯುವೆವು.

ಪ್ರಕೃತ, ಕರ್ನಾಟಕದ ಶಾಸನಗಳ ಪರಿಚಯವನ್ನು ಮಾಡಿಕೊಡುವಾಗ ಅವುಗಳ ಉಗಮ, ಬೆಳೆವಣಿಗೆ, ಏಳ್ಗೆ, ಅಸ್ತಗಳನ್ನು ಕುರಿತು ಈ ಪ್ರಕರಣದಲ್ಲಿ ನಿರೂಪಿಸುವೆವು.

ಶಾಸನಗಳ ಉಗಮವು ದಾನಧರ್ಮಗಳಲ್ಲಿ. ವೇದಗಳಲ್ಲಿ ಯಜ್ಞಯಾಗಾದಿಗಳನ್ನು ಮಾಡುವಾಗ ಯಜಮಾನನು ಋತ್ವಿಕ್ ಮೊದಲಾದವರಿಗೆ ಇಂತಿಷ್ಟು ಧನವನ್ನು ದಕ್ಷಿಣೆಯಾಗಿ ಕೊಡುತ್ತಿದ್ದನು. ಅದು ಬ್ರಾಹ್ಮಣರ ಷಟ್ಕರ್ಮಗಳಲ್ಲಿ ಒಂದಾಗಿ ಪರಿಣಮಿಸಿತು. ದಾನ-ಪ್ರತಿಗ್ರಹಗಳನ್ನೂ—ಇಂಥ ಯಾಗಗಳಲ್ಲಿ ಋತ್ವಿಜರಿಗೆ ಅವರವರ ಕರ್ಮದ ತಾರತಮ್ಯಕ್ಕನುಸರಿಸಿ ದಕ್ಷಿಣೆಗಳನ್ನು ಕೊಡತಗೊಳ್ಳುವ ಕಟ್ಟಳೆಗಳನ್ನೂ ವೈದಿಕ ಗ್ರಂಥಗಳಲ್ಲಿ ಗೃಹ್ಯಸೂತ್ರಗಳಲ್ಲಿ ನೋಡಬಹುದು. ಅಂಥ ನಿಯಮಗಳು ಗ್ರಂಥಗಳಲ್ಲಿ ದೊರೆಯುವವೇ ವಿನಾ ಆಗಿನ ಕಾಲದ ರಾಜರೂ ಮಹರ್ಷಿಗಳೂ ತಾವು ಮಾಡಿದ ಯಾಗಗಳ ಬಗೆಗೆ ಉಲ್ಲೇಖಗಳನ್ನು ಶಾಸನರೂಪವಾಗಿ ಬರೆದಿಟ್ಟದ್ದು ದೊರೆಯುವದಿಲ್ಲ. ಕಾಲನ ದವಡೆಯಲ್ಲಿ ಸಿಕ್ಕು ನುಚ್ಚು ನೂರಾದ ಸಂಗತಿಗಳನ್ನು ಗೊತ್ತು ಹಚ್ಚುವದು ಕಷ್ಟಸಾಧ್ಯ. ಯಜ್ಞ-ಯಾಗಾದಿ ಧರ್ಮಗಳ ದಾನ-ಪ್ರತಿಗ್ರಹಗಳ— ಪರಂಪರೆಯಲ್ಲಿ ಧರ್ಮ ಶಾಸನಗಳನ್ನು ಬರೆದಿಡುವ ಪರಿಪಾಠವು ಭಾರತ ವರ್ಷದಲ್ಲಿ ಪ್ರಾಚೀನ ಕಾಲದಿಂದ ಅಂದರೆ ಮೌರ್ಯರ ಕಾಲದಿಂದಂತೂ ಇದ್ದುದು ತಿಳಿಯಬರುತ್ತದೆ. ಅಶೋಕನ ಧರ್ಮಲಿಪಿಗಳು ದಾನಪತ್ರಗಳಾಗಿರದಿದ್ದರೂ ಧರ್ಮೋಪದೇಶಪರವಾಗಿವೆ ಐಹಿಕ-ಪಾರತ್ರಿಕ ಧರ್ಮಗಳಲ್ಲಿ ಐಹಿಕವಾದ ದಾನಪತ್ರಗಳು ಕಾಲಾಂತರದಲ್ಲಿ ಹೆಚ್ಚು ಬಳಕೆಯಲ್ಲಿ ಬಂದವು. ಇವು ದಾನ-ಧರ್ಮಗಳನ್ನು ಉಲ್ಲೇಖಿಸಿ ಅವುಗಳ ಮೂಲ್ಯವಾಗಿ ಧರ್ಮೋಪದೇಶವನ್ನು ಮಾಡುವವು. ಬೌದ್ಧರಲ್ಲಿ ಪ್ರತಿಯೊಬ್ಬರೂ

ಚೈತ್ಯಾಲಯ-ಸ್ತೂಪ-ವಿಹಾರಗಳಿಗೆ ದಾನಮಾಡಿ ಪುಣ್ಯಭಾಗಿಯಾಗಬೇಕೆಂದು ಧರ್ಮದ ಕಟ್ಟಳೆ ಇರುವದರಿಂದ ಆ ಧರ್ಮದ ಬೆಳವಣಿಗೆಯ ಕಾಲದಲ್ಲಿ ಅಂದರೆ ಮೌರ್ಯ-ಆಂಧ್ರಭೃತ್ಯರ ಕಾಲದಲ್ಲಿ ಬೌದ್ಧ ಧರ್ಮಶಾಸನಗಳೇ ಹೆಚ್ಚಾಗಿ ಸಿಕ್ಕುತ್ತವೆ. ಮುಂದೆ ಆರ್ಯಧರ್ಮದ ಪುನರುಜ್ಜೀವನವಾದಾಗ-ಗುಪ್ತ, ಕದಂಬ, ವಾಕಾಟಕ-ಚಾಲುಕ್ಯರ ಕಾಲದಲ್ಲಿ ಬೌದ್ಧರಕಿಂತ ಹೆಚ್ಚಾದ ಉತ್ಸಾಹದಿಂದ ಗುಡಿ-ಗುಂಡಾರ ಮಠಗಳನ್ನು ಕಟ್ಟಿಸಿ ದತ್ತಿಗಳನ್ನು ಹಾಕಿ ಕೊಡುವ ರೂಢಿಯು ಹೆಚ್ಚಾಯಿತು. ಇದರಿಂದ ಇವರ ಕಾಲದಲ್ಲಿ ಶಾಸನಗಳ ಸಂಖ್ಯೆಯು ಬೆಳೆಯುತ್ತ ಹೋಯಿತು. ಕರ್ನಾಟಕದಲ್ಲಿ ಕಲ್ಯಾಣಿ ಚಾಲುಕ್ಯರು ಅವರ ಮಾಂಡಲಿಕರಾದ ಕಳಚುರ್ಯ ಹೊಯ್ಸಳ ಯಾದವ, ಮುಂದೆ ವಿಜಯನಗರದ ಅರಸು ಮನೆತನಗಳು ಹೊರಡಿಸಿದ ಶಾಸನಗಳು ಅಸಂಖ್ಯವಾಗಿವೆ. ಜೈನರ ಪ್ರಭಾವವಿದ್ದ ಸ್ಥಳಗಳಲ್ಲಿ ಅಥವಾ ಜೈನ ರಾಜರ ಆಳಿಕೆಗಳಲ್ಲಿ ಜೈನ ಶಾಸನಗಳು ವಿಪುಲವಾಗಿ ಸಿಕ್ಕುತ್ತವೆ. ಅಂತು ಸಾಮಾನ್ಯವಾಗಿ ವಿವೇಚಿಸುವುದಾದರೆ ಕರ್ನಾಟಕದ ಶಾಸನಗಳ ವಿಪುಲತೆಗೆ ಮೊದಲು ಧರ್ಮವೇ ಮೂಲವೆಂದು ಧಾರಾಳವಾಗಿ ಹೇಳಬಹುದು. ಆರ್ಯ ಧರ್ಮದ ಅಳಿಗಾಲದ ಚಿಹ್ನಗಳು ಇಸ್ಲಾಂ ಧರ್ಮದ ಪ್ರಸಾರದ ಕಾಲದಲ್ಲಿ ತಲೆದೋರಿದವು. ಮುಸಲ್ಮಾನ ರಾಜರ ಕಾಲದಲ್ಲಿ ಆರ್ಯ (ವೈದಿಕ) ಧರ್ಮಕ್ಕೆ ಅವಶ್ಯವಿದ್ದ ಸ್ಫೂರ್ತಿಯುಕ್ತ ಪೋಷಣೆ ಇಲ್ಲದ್ದರಿಂದ ಆಗ ವೈದಿಕ ಧರ್ಮದ ದೇವಾಲಯಗಳ ಅಳಿಗಾಲವು ಆರಂಭಿಸಿತು. ಬ್ರಿಟಿಶರ ಆಳಿಕೆಯಲ್ಲಿ ಅದು ಸಂಪೂರ್ಣವಾಗಿ ಕೊನೆಗಂಡಿತು. ಈ ರೀತಿಯಾಗಿ ದೇವಾಲಯಗಳ ಉಗಮ-ಬೆಳೆವಣಿಗೆ-ಅಳಿಗಾಲಗಳನ್ನು ಅನುಲಕ್ಷಿಸಿ ಶಾಸನಗಳು ಹುಟ್ಟಿದವು, ಬೆಳೆದವು ಮತ್ತು ನಷ್ಟವಾದವು ಅಥವಾ ಹುಟ್ಟಲೇ ಇಲ್ಲವೆಂದು ತಿಳಿಯಬಹುದು.

ಈ ವಿಚಾರಗಳು ಹಿಂದುಸ್ಥಾನದ ಶಾಸನಗಳ ವಿಷಯದಲ್ಲಿಯೂ ಸಾಮಾನ್ಯವಾಗಿ ಅನ್ವಯಿಸುತ್ತವೆ.

ಈ ಧರ್ಮ ಮೂಲವಾದ ಶಾಸನಗಳಲ್ಲದೆ ಕರ್ನಾಟಕದಲ್ಲಿ ಬೇರೆ ವಿಧದ ಲಿಪಿಗಳೂ ಸಿಕ್ಕುತ್ತವೆ. ವೀರಗಲ್ಲುಗಳು ಅವುಗಳಲ್ಲಿ ಮುಖ್ಯವಾದುವು. ಕರ್ನಾಟಕವು ಶೌರ್ಯದ ಬೀಡಾಗಿತ್ತು. ೭ ನೆಯ ಶತಮಾನದಲ್ಲಿ ಹಿಂದುಸ್ತಾನಕ್ಕೆ ಬಂದ ಚೀನಾದೇಶದ ಪ್ರವಾಸಿಕನಾದ ಹುಯೆನ್‌ತ್ಸಾಂಗನು ಬರೆ

ದಿಟ್ಟ ವರದಿಯಿಂದ ಇದು ಸ್ಪಷ್ಟವಾಗುತ್ತದೆ. ಅವನು ೨ನೆಯ ಪುಲಿಕೇಶಿಯ ರಾಜ್ಯಕ್ಕೆ ಬಂದಾಗ ಹೀಗೆ ಬರೆದಿದ್ದಾನೆ-"ಮೊಹೋಲಚ (ಮೊಹೋಲಟ)ವು ಸುಮಾರು ೬೦೦೦ ಲಿ (ಸು. ೧೦೦೦ ಮೈಲು) ಸುತ್ತಳತೆಯುಳ್ಳದ್ದು.... ಜನರು ಪ್ರಾಮಾಣಿಕರೂ ಸಭ್ಯರೂ ಆಗಿದ್ದಾರೆ. ತಮಗೆ ಅಪಮಾನ ಮಾಡಿದ ವರಿಗೆ ಪ್ರತೀಕಾರಮಾಡಲು ಪ್ರಾಣವನ್ನಾದರೂ ತೊರೆಯುವರು....ಶತ್ರುಗಳ ಮೇಲೆ ಸೇಡನ್ನು ತೀರಿಸಿಕೊಳ್ಳುವ ಮೊದಲು ಅವರಿಗೆ ಎಚ್ಚರಕೊಡುವರು.... ಈ ದೇಶದಲ್ಲಿ ನೂರಾರು ಮಂದಿ ಜಗಜಟ್ಟಿಗಳಿದ್ದಾರೆ. ಹೋರಾಡುವುದಕ್ಕೆ ಮೊದಲು ಅವರು ಮದ್ಯಪಾನದಿಂದ ಮತ್ತರಾಗುವರು. ಆಗ ಒಬ್ಬೊಬ್ಬನು ಹತ್ತು ಸಾವಿರ ಮಂದಿಯನ್ನು ಎದುರಿಸುವಷ್ಟು ಸಮರ್ಥನಾಗುವನು. ಜಟ್ಟಿಯು ಕಾಳಗದಲ್ಲಿ ಯಾರನ್ನಾದರೂ ಕೊಂದರೆ ಅವನು ಶಿಕ್ಷೆಗೆ ಗುರಿ ಯಾಗುವುದಿಲ್ಲ" ಇತ್ಯಾದಿ. ಈ ಶೌರ್ಯಪರಂಪರೆಯನ್ನು ಕನ್ನಡಿಗರು ಈಗಲೂ ಕಾದುಕೊಂಡಿದ್ದಾರೆಂದು ಹೆಮ್ಮೆಯಿಂದ ಹೇಳಬಹುದು. ನೆರೆ ಹೊರೆಯ ಹಳ್ಳಿಗರು ಆಕಳನ್ನು ಕದ್ದೊಯ್ಯಲಿಕ್ಕೆ ಬಂದ ಸನ್ನಿವೇಶಗಳೂ ಆಗ ಅಲ್ಲಿಯ ಶೂರ ಪುರುಷರು ದನಗಳನ್ನು ರಕ್ಷಿಸಿ ಹಳ್ಳಿಯ ಮಾನ-ಮರ್ಯಾದೆ ಗಳನ್ನು ರಕ್ಷಿಸಿದ್ದೂ ಅಲ್ಲಲ್ಲಿ ದೊರೆಯುವ ವೀರಗಲ್ಲುಗಳಲ್ಲಿ ರೂಪಿಸಲ್ಪಟ್ಟಿರು ತ್ತವೆ.

ಶೂರ ಪುರುಷರ ಬೀಡಾದ ಈ ದೇಶದ ರಾಜರು ಉತ್ತರ ಹಿಂದುಸ್ಥಾನ-ದಕ್ಷಿಣ ಹಿಂದುಸ್ಥಾನಗಳ ಮೇಲೆ ದಿಗ್ವಿಜಯವನ್ನು ಮಾಡುತ್ತಿದ್ದರು. ಕದಂಬರು ವಾಕಾಟಕ-ಪಲ್ಲವ-ಗಂಗ ಅರಸರ ಮೇಲೆ ದಂಡೆತ್ತಿ ಹೋದ ರೆಂದು ಅವರ ಶಾಸನಗಳಿಂದ ತಿಳಿಯುಬರುತ್ತದೆ. ಚಾಲುಕ್ಯರಂತೂ ಗಂಗಾ ಯಮುನಾ ಪಾಲಿಧ್ವಜಗಳನ್ನು ಪ್ರತಿರಾಜರಿಂದ ಸೆಳೆದುಕೊಂಡರು. ರಾಷ್ಟ್ರ ಕೂಟರು ಆಸೇತು ಹಿಮಾಚಲದ ವರೆಗೆ ರಣಭೇರಿಯನ್ನು ಹೊಯ್ಸಿದರು. ಕಲ್ಯಾಣಿಯ ಚಾಳುಕ್ಯರು ಶತ್ರು ರಾಜರನ್ನು ಸೋಲಿಸಿ ಶಕಪುರುಷರಾದರು. ಹೊಯ್ಸಳ-ಯಾದವ-ವಿಜಯನಗರದ ರಾಜಮನೆತನಗಳ ದಿಗ್ವಿಜಯ ಚರಿ ತ್ರೆಯು ಉಜ್ವಲವಾಗಿ ಇದೆ. ದಿಗ್ವಿಜಯಕ್ಕೆ ಹೋಗುವಾಗ-ಗೆದ್ದು ಬರುವಾಗ ರಾಜರು ಹಾಕಿಕೊಟ್ಟ ದಾನ ಪತ್ರಗಳು ಕರ್ನಾಟಕದಲ್ಲಿ ವಿಶೇಷವಾಗಿ ದೊರೆ ಯುತ್ತವೆ. ಇವಲ್ಲದೆ ನಕರಂಗಳು, ಸೆಟ್ಟಿ-ಸೆಟ್ಟಿಗುತ್ತ ಉಭಯ ನಾನಾದೇಶಿ

ವ್ಯಾಪಾರಸ್ಥರು ತಮ್ಮ ಉದ್ಯೋಗ—ವ್ಯಾಪಾರಗಳ ಕಟ್ಟಳೆಗಳನ್ನಲ್ಲದೆ ಗುಡಿ-ಗುಂಡಾರಗಳನ್ನು ಕಟ್ಟಿಸಿ ಅವುಗಳಿಗೆ ಹಾಕಿಕೊಟ್ಟ ದತ್ತಿಗಳ ಶಾಸನಗಳು ಕರ್ನಾಟಕದಲ್ಲಿ ವಿಪುಲವಾಗಿ ಸಿಕ್ಕುತ್ತವೆ. ಇಡಿಯ ದಕ್ಷಿಣ ಹಿಂದುಸ್ತಾನದ ಕನ್ನಡ-ತೆಲುಗು-ತಮಿಳು ದೇಶಗಳ ವ್ಯಾಪಾರವು ಅಯ್ಯಾವಳೆಯ ಅಯ್ಯೂರ್ವರ್ ಸ್ವಾಮಿಗಳ ಆಧಿಪತ್ಯದಲ್ಲಿ ನಡೆಯುತ್ತಿತ್ತೆಂದು ಶಾಸನಗಳಿಂದ ತಿಳಿಯ ಬರುತ್ತದೆ. ಹೀಗೆ ಧರ್ಮವಲ್ಲದೆ ಲೌಕಿಕ ಪ್ರಯೋಜನಗಳೂ ಈ ದೇಶದ ಶಾಸನಗಳ ಉತ್ಪತ್ತಿಗೆ ಕಾರಣವಾದವು ಎಂದು ಹೇಳಬಹುದು.

ಮೊದಮೊದಲು ಚಿಕ್ಕ ಅರಸುಮನೆತನಗಳಾಗಿದ್ದು ಮುಂದೆ ಪ್ರಬಲರಾಗುತ್ತ ಮಹಾರಾಜಾಧಿರಾಜ, ಚಕ್ರವರ್ತಿ, ಮುಂತಾದ ಹೆಚ್ಚಿನ ಪ್ರತಿಷ್ಠೆಯನ್ನು ಗಳಿಸಿದ ರಾಜವಂಶಗಳು ಬೆಳೆಯುತ್ತ ಹೋದಂತೆ ಅವರ ಪರಾಕ್ರಮಗಳನ್ನೂ ದಾನ ಧರ್ಮದ ಕೃತಿಗಳನ್ನೂ ಒಳಗೊಂಡ ಶಾಸನಗಳ ಸಂಖ್ಯೆಯೂ ಬೆಳೆಯುತ್ತ ಹೋಯಿತು. ಹೀಗೆ ಕರ್ನಾಟಕದಲ್ಲಿ ಲಿಪಿ ಸಾಮಗ್ರಿಯು ಬೆಳೆಯಲಿಕ್ಕೆ ಕಾರಣವಾಯಿತು.

ವೀರಗಲ್ಲುಗಳಲ್ಲದೆ ನೆತ್ತರುಗೆಯ್, ರಕ್ತಕೊಡುಗೆ, ಮುಂತಾದವುಗಳನ್ನು ಉಲ್ಲೇಖಿಸುವ ಕಲ್ಲುಗಳೂ, ವಿದ್ಯಾದಾನಗಳೂ, ದೇವದತ್ತಿಗಳೂ ವ್ಯಾಪಾರದ ಅಂಶಗಳನ್ನೊಳಗೊಂಡ ಲೌಕಿಕ ಶಾಸನಗಳೂ ಧಾತುಮಯ ಮತ್ತು ಕಲ್ಲಿನ ವಿಗ್ರಹಗಳ ಮೇಲೆ ಕೆತ್ತಿದ ಲಿಪಿಗಳೂ ಕರ್ನಾಟಕದಲ್ಲಿ ಹೇರಳವಾಗಿ ಸಿಕ್ಕುತ್ತವೆ. ಇವುಗಳ ಸಾಮಾನ್ಯ ಪರಿಚಯವನ್ನು ಮುಂದೆ ಮಾಡಿಕೊಡುವೆವು.

೨ ಕರ್ನಾಟಕದ ಶಾಸನಗಳ ಸಾಮಾನ್ಯ ಸ್ವರೂಪ

ಕರ್ನಾಟಕದಲ್ಲಿ ದೊರೆಯುವ ಶಾಸನಗಳನ್ನು (೧) ಕಾಲಭೇದದಿಂದ (೨) ದೇಶಭೇದದಿಂದ (೩) ರಾಜಮನೆತನಗಳ ಭೇದದಿಂದ (೪) ಭಾಷಾ ಭೇದದಿಂದ ಮತ್ತು (೫) ಲಿಪಿ ಭೇದದಿಂದ ಹೀಗೆ ಐದು ಗುಂಪುಗಳಲ್ಲಿ ವಿಭಾಗ ಮಾಡಬಹುದು. ಅಲ್ಲಿ ಹೇಳಲ್ಪಡುವ ಅಂಶಗಳ ಭೇದದಿಂದ ವಿಭಾಗಿಸುವುದಾದರೆ (೧) ದೇವಸ್ಥಾನದ ದತ್ತಿಗಳು (೨) ವಿದ್ಯಾದಾನಗಳು (೩) ವೀರ ಪುರುಷ ಅಥವಾ ಸತಿ ಸ್ಮಾರಕಗಳು, ನಿಶಿಧಿ ಕಲ್ಲುಗಳು ಇತ್ಯಾದಿ (೪) ಧರ್ಮ ಗುರುಗಳಿಗೆ ಅಥವಾ ವಿಶಿಷ್ಟ ಜನರಿಗೆ ಕೊಟ್ಟ ದಾನಗಳನ್ನು ಅಥವಾ ಅವರ ಸ್ತುತಿಗಳನ್ನು ಕೊಡುವ ಶಾಸನಗಳು (೫) ಮೂರ್ತಿಗಳ ಮೇಲಿನ ಶಾಸನಗಳು ಇತ್ಯಾದಿಯಾಗಿಯೂ ವಿಂಗಡಿಸಬಹುದು. ಯಾವ ತತ್ವಗಳ ಮೇಲೆ ವಿಭಾಗಿಸುವುದಾದರೂ ಆಯಾ ಶಾಸನಗಳನ್ನು ಅಭ್ಯಾಸ ಮಾಡುವಾಗ ಇವೆಲ್ಲ ವಿಭಾಗಗಳಿಗೆ ಅನ್ವಯಿಸುವ ತತ್ವಗಳನ್ನು ಲಕ್ಷದಲ್ಲಿಡತಕ್ಕದ್ದು. ಕಾಲಭೇದದಿಂದ ವಿಭಾಗ ಮಾಡಿ ಆಯಾಯ ಗುಂಪುಗಳಲ್ಲಿ ತಲೆದೋರುವ ವಿಶಿಷ್ಟಾಂಶಗಳನ್ನು ಇಲ್ಲಿ ದಿಗ್ದರ್ಶನ ಮಾಡುತ್ತೇವೆ.

ಸಾಮಾನ್ಯವಾಗಿ ಕರ್ನಾಟಕದ ಶಾಸನಗಳಲ್ಲಿ ಬೆಳವಣಿಗೆಯ ಕ್ರಮವನ್ನನುಲಕ್ಷಿಸಿ ಈ ಕೆಳಗಿನ ಪ್ರಭೇದಗಳನ್ನು ತಿಳಿದುಕೊಳ್ಳಬಹುದು.

(೧) ಕ್ರಿ. ಶ. ಪೂ. ೩ನೆಯ ಶತಮಾನದಿಂದ ಕ್ರಿ. ಶ. ೪ನೆಯ ಶತಮಾನದವರೆಗೆ (ಅಶೋಕನ ಕಾಲದಿಂದ ಬನವಾಸಿಯ ಕದಂಬರ ಉದಯದ ವರೆಗೆ)

(೨) ಕ್ರಿ. ಶ. ೫ನೆಯ ಶತಮಾನದಿಂದ ಕ್ರಿ. ಶ. ೧೦ನೆಯ ಶತಮಾನದ ವರೆಗೆ (ಕದಂಬರಿಂದ ಆರಂಭಿಸಿ ಕಲ್ಯಾಣದ ಚಾಳುಕ್ಯರ ಉದಯದ ವರೆಗೆ).

(೩) ಕ್ರಿ. ಶ. ೧೧ನೆಯ ಶತಮಾನದಿಂದ ಕ್ರಿ. ಶ. ೧೪ನೆಯ ಶತಮಾನದವರೆಗೆ (ಕಲ್ಯಾಣದ ಚಾಳುಕ್ಯರಿಂದ ವಿಜಯನಗರದ ಅರಸೊತ್ತಿಗೆ ಹುಟ್ಟುವವರೆಗೆ).

(೪) ಕ್ರಿ. ಶ. ೧೫ನೆಯ ಶತಮಾನದಿಂದ ಕ್ರಿ. ಶ. ೧೮-೧೯ ನೆಯ ಶತಮಾನದವರೆಗೆ-- ವಿಜಯನಗರದ ಕಾಲದಿಂದ ಮರಾಠ ಅರಸರ ಆಳಿಗಾಲದವರೆಗೆ

(೫) ಆಧುನಿಕ ಕಾಲ— ಇದು ಐತಿಹಾಸಿಕ ಕಾಗದ ಪತ್ರಗಳ ಕಾಲ

(೧) ಕ್ರಿ. ಶ. ಪೂ. ೩ನೆಯ ಶತಕದ ಮೌರ್ಯ ಅಶೋಕ ಚಕ್ರವರ್ತಿಯ ಶಾಸನಗಳು ಕೊಪ್ಪಳದಲ್ಲಿಯೂ ಮೈಸೂರು ಚಿತ್ರದುರ್ಗ ಜಿಲ್ಹೆಯ ಮೊಳ-ಕಾಲ್ಮುರು ತಾಲೂಕಿನ ಸಿದ್ದಾಪುರ ಜಟಿಂಗ ರಾಮೇಶ್ವರ ಮತ್ತು ಬ್ರಹ್ಮಗಿರಿ ಗಳಲ್ಲಿಯೂ ರಾಯಚೂರು ಜಿಲ್ಹೆಯ ಮಾಸ್ಕಿಯಲ್ಲಿಯೂ ದೊರೆತಿವೆ. ಅವು ಗಳಲ್ಲಿ ರಾಜನು ತನ್ನ ಪ್ರತಿನಿಧಿ ಮಾಂಡಲಿಕರಿಗೆ ಕೆಲವು ಆಜ್ಞೆಗಳನ್ನು ವಿಧಿಸಿ ಜನರಲ್ಲಿ ಸೌಹಾರ್ದ, ಅಹಿಂಸಾ, ಪ್ರೇಮಗಳನ್ನು ಉಪದೇಶಿಸಬೇಕೆಂದು ಬೇಡಿದ್ದಾನೆ. ಅವುಗಳ ಲಿಪಿ ಬ್ರಾಹ್ಮೀ; ಭಾಷೆ ಪೈಶಾಚೀ ಮಿಶ್ರ ಮಾಗಧೀ ಪ್ರಾಕೃತ.

ಸಾತಕರ್ಣಿ-ಸಾತವಾಹನರು (ಆಂಧ್ರಭೃತ್ಯರು) ಮೌರ್ಯರ ಮಾಂಡ ಲಿಕರಾಗಿದ್ದು ಈಗಿನ ಕರ್ನಾಟಕ-ಮಹಾರಾಷ್ಟ್ರ-ಆಂಧ್ರ ಅಂದರೆ ದಕ್ಷಿಣಾ ಪಥದಲ್ಲಿ ಮೌರ್ಯರ ತರುವಾಯ ರಾಜ್ಯಭಾರ ಮಾಡುತ್ತಿದ್ದರು. ಬಳ್ಳಾರಿ ಜಿಲ್ಹೆಯ ಮಾಕೆಡೊನಿಯಲ್ಲಿ ೨ನೆಯ ಪುಳುಮಾವಿಯ ಶಾಸನ ಸಿಕ್ಕಿದೆ. ಸಾತಕರ್ಣಿಗಳ ಮಾಂಡಲಿಕರು ಚುಟುಕುಲ (ಚೂತಕುಲ) ದ ಅರಸರು ದಕ್ಷಿಣ-ಉತ್ತರ ಕನ್ನಡ ಜಿಲ್ಹೆಯ ಭಾಗಗಳಲ್ಲಿ ಆಳುತ್ತಿದ್ದರು. ಬನವಾಸಿಯಲ್ಲಿ ಅವರ ಮನೆತನದ ಸಿವಸ್ಕಂದನಾಗಶ್ರೀಯ ಒಂದು ಶಾಸನವು ಸಿಕ್ಕಿದೆ. ಈ ಶಾಸನಗಳ ಕಾಲವು ಕ್ರಿ. ಶ. ೩ನೆಯ ಶತಕದ ವರೆಗೆ ಹೋಗುತ್ತದೆ. ಇವರ ತರುವಾಯ ಪಲ್ಲವರು ಈ ಭಾಗವನ್ನು ಆಕ್ರಮಿಸಿರಬೇಕು.. ಅವರ ಮಾಂಡ ಲಿಕರು ಬನವಾಸಿಯ ಕದಂಬರು. ಅವರಿಂದ ಮಯೂರಶರ್ಮನು ಸ್ವತಂತ್ರ ರಾಜನಾದನು. ಈ ಕಾಲದ ಶಾಸನದ ಅಕ್ಷರಗಳಿಗೆ **ಗುಹಾಲಿಪಿ** (cave-alphabet) ಯೆಂಬ ಹೆಸರು ಕೊಟ್ಟಿದೆ. ಅಶೋಕನಿಂದ ಹಿಡಿದು ಪಲ್ಲ ವರು ಬರುವವರೆಗೆ ಆಳಿದ ರಾಜರು ಬೌದ್ಧಧರ್ಮದವರಿದ್ದರು. ಚೈತ್ಯಾಲಯ ವಿಹಾರಗಳಿಗೆ ದತ್ತಿಗಳನ್ನು ಬಿಟ್ಟಿದ್ದರು. ಪಲ್ಲವರೂ ಕದಂಬರೂ ಶೈವರಾಗಿ

ದ್ದರು. ಅಷ್ಟರಲ್ಲಿ ಬೌದ್ಧರು ಹೋಗಿ ಜೈನರು ಕರ್ನಾಟಕದಲ್ಲಿ ತಲೆಯೆತ್ತಿದ್ದರು. ಕದಂಬರು ಜೈನರಿಗೆ ಆಶ್ರಯವನ್ನು ಕೊಟ್ಟಿದ್ದರು.

(೨) ಕದಂಬ ಮಯೂರ ಶರ್ಮನ ಚಂದ್ರವಳ್ಳಿ ಶಾಸನವು ಅವನ ಪರಾಕ್ರಮಗಳನ್ನು ಕೊಡುತ್ತದೆ. ಅದು ಪ್ರಾಕೃತ ಭಾಷೆಯಲ್ಲಿಯೂ ಪರಿಷ್ಕೃತ ಬ್ರಾಹ್ಮೀ ಲಿಪಿಯಲ್ಲಿಯೂ ಇರುವದು. ಈ ಮನೆತನದ ಮುಂದಿನ ಶಾಸನಗಳೆಲ್ಲ ಸಂಸ್ಕೃತದಲ್ಲಿ ಇರುತ್ತವೆ. ಲಿಪಿಯು ಕನ್ನಡದ ಮೂಲ ರೂಪವೆಂದೆನ್ನಿಸಿಕೊಳ್ಳುವ ಪರಿಷ್ಕೃತ ಬ್ರಾಹ್ಮೀ ಲಿಪಿಯಲ್ಲಿ ಬರೆಯಲ್ಪಟ್ಟಿದೆ.

ಶಾಸನಗಳಲ್ಲಿ ಬರುವ ಕದಂಬ ಮನೆತನದ ಒಕ್ಕಣಿಕೆಯನ್ನು ಗಮನಿಸತಕ್ಕದ್ದು:—

" ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಾನಾಂ ಮಾನವ್ಯಸಗೋತ್ರಾಣಾಂ ಅಂಗಿರಸಾಂ ಪ್ರತಿಕೃತ ಸ್ವಾಧ್ಯಾಯ ಚರ್ಚಾಪಾರಾಣಾಂ ಸದ್ಧರ್ಮ ಸದಂಬಾನಾಂ ಕದಂಬಾನಾಂ "…. ಈ ಪ್ರಶಸ್ತಿಯು ಸಾತವಾಹನರ ಪ್ರಶಸ್ತಿಯನ್ನು ಹೋಲುತ್ತದೆ.

ಕದಂಬರ ತರುವಾಯದಲ್ಲಿ ಬಂದ ಬಾದಾಮಿಯ ಚಾಳುಕ್ಯರ ಶಾಸನಗಳಲ್ಲಿ ಬರೆಯುವ ಪದ್ಧತಿಯು ಅಷ್ಟರಲ್ಲಿ ಮಾರ್ಪಟ್ಟಿತ್ತು. ಅವರ ಶಾಸನಗಳು ಬಡಿವಾರದ ವರ್ಣನೆಗಳಿಲ್ಲದೆ ಆದ್ಯ ಮಂಗಲ ಶ್ಲೋಕ, ರಾಜನ ಮೂರು ತಲೆಮಾರಿನ ವಂಶಾವಳಿ—ಉಪೋದ್ಘಾತ ರೂಪವಾದ ಚಿಕ್ಕ ವರ್ಣನೆಗಳು, ದತ್ತಿಯ ವಿವರಣೆ ಮತ್ತು ದಾನರಕ್ಷಣೆಯ ಗದ್ಯ-ಪದ್ಯಗಳು ಇತ್ಯಾದಿಗಳನ್ನು ನಿರ್ದೇಶಿಸುತ್ತವೆ. ಗದ್ಯವೇ ಪ್ರಧಾನವಾದ ಭಾಷಾ ಶೈಲಿಯಾಗಿತ್ತು. ಆದರೆ ಅಲ್ಲಲ್ಲಿ ವರ್ಣನೆಗಳಲ್ಲಿ ಶ್ಲೋಕಗಳೂ ಬರುತ್ತವೆ. ಸಾಮಾನ್ಯವಾಗಿ ಈ ಮನೆತನದ ಶಾಸನಗಳ ಭಾಷೆಯು ಸಂಸ್ಕೃತವಿರುವದು. ಆದರೆ ಆಯಾ ದೇಶ ಭಾಷೆಗಳಿಗನುಗುಣವಾಗಿ ಕನ್ನಡದಲ್ಲಿಯೂ ತೆಲಗುವಿನಲ್ಲಿಯೂ ಅವರ ಲಿಪಿಗಳು ಸಿಕ್ಕುತ್ತವೆ. ಎಲ್ಲಕ್ಕೂ ಹಳೆಯ ಶಕ ವರ್ಷವುಳ್ಳ ಶಾಸನವೆಂದರೆ ಚಾಳುಕ್ಯ ೧ನೆಯ ಪುಲಿಕೇಶಿಯ ಬಾದಾಮಿಯ ಬೆಟ್ಟದ ಶಾಸನ. ಇದರ ಪಾಠ ಹೀಗೆ ಇದೆ:—

೧ ಸ್ವಸ್ತಿ ಶಕವರ್ಷೇಷು ಚತುಶ್ಶತೇಷು ಪಞ್ಚ ಪಷ್ಟಿಯುತೇಷು ।

೨ ಅಶ್ವಮೇಧಾದಿಯಜ್ಞಾನಾಂ ಯಜ್ವಾ ಶ್ರೌತವಿಧಾನತಃ ।

೩ ಅಧಸ್ತಾರುಪರಿಷ್ಟಾಚ್ಚ ದುರ್ಗಮೇತದಚೀಕರತ್ ॥

ಚಲುಕ್ಯ ಮನೆತನದ ಒಕ್ಕಣಿಕೆಯುಳ್ಳ ಒಂದು ತಾಮ್ರ ಶಾಸನದ ಭಾಗವನ್ನು ಇದರಡಿಕೊಡುತ್ತೇವೆ. ಈ ಕಾಲದ ಲಿಪಿಗೆ ಚಲುಕ್ಯಲಿಪಿಯೆಂಬ ಹೆಸರು ಬಂದಿದೆ. ಇದೇ ಈಗಿನ ಕನ್ನಡ ಲಿಪಿಯ ಮೂಲವು

ವಿಜಯಾದಿತ್ಯನ ರಾಯಗಡ ತಾಮ್ರಶಾಸನ (EP. Ind. vol. X, P. 15)

೧ ಸ್ವಸ್ತಿ॥ ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾ ರ್ಣವಂ। ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ ॥

೨ ಶ್ರೀಮತಾಂ ಸಕಲ ಭುವನ ಸಂಸ್ತೂಯಮಾನ ಮಾನವ್ಯಸ ಗೋತ್ರಾಣಾಂ ಹಾರಿತಿ ಪುತ್ರಾಣಾಂ ಸಪ್ತಲೋಕಮಾತೃಭಿರಭಿವ

೩ ರ್ದ್ಧಿತಾನಾಂ ಕಾರ್ತ್ತಿಕೇಯ ಪರಿರಕ್ಷಣ ಪ್ರಾಪ್ತ ಕಲ್ಯಾಣ ಪರಮ್ಪರಾಣಾಂ ಭಗವನ್ನಾರಾಯಣ ಪ್ರಸಾದ ಸಮಾಸಾ-

೪ ದಿತವರಾಹಲಾಞ್ಛನೇಕ್ಷಣ ಕ್ಷಣವಶೀಕೃತಾಶೇಷ ಮಹೀಭೃತಾಂ ಚಲಿಕ್ಯಾನಾಂ ಕುಲಮಲಙ್ಕರಿಷ್ಣೋ ರಶ್ವಮೇ-

೫ ಧಾವಭೃಥಸ್ನಾನಪವಿತ್ರೀ........

ರಾಷ್ಟ್ರಕೂಟರು ಚಲುಕ್ಯರಾದ ಮೇಲೆ ಕರ್ನಾಟಕದಲ್ಲಿ ಆಳಿದ ರಾಜರು. ಅವರ ಶಾಸನಗಳು ಕನ್ನಡ, ಸಂಸ್ಕೃತ, ತೆಲಗು ಮತ್ತು ತಮಿಳು ಭಾಷೆಗಳಲ್ಲಿ ಸಿಕ್ಕುತ್ತವೆ. ಲಿಪಿ ಕನ್ನಡ ಮತ್ತು ನಾಗರಿ ಇದಲ್ಲದೆ ಔತ್ತರೇಯವಲಭೀ ರಾಜರ ಲಿಪಿಯ ಭಾವನೆಯನ್ನೂ ತೋರಿಸುತ್ತದೆ. ಶಾಸನ ಬರೆಯುವ ಕ್ರಮ ದಲ್ಲಿ ಅಷ್ಟೊಂದು ವ್ಯತ್ಯಾಸವಿರದಿದ್ದರೂ ವರ್ಣನಾ ಭಾಗಗಳು ಹೆಚ್ಚಾಗಿ ಸೇರಿ ಸಲ್ಪಡುವದು ಎದ್ದು ಕಾಣುತ್ತದೆ. ಮಂಗಲಶ್ಲೋಕ, ಮೂಲಪುರುಷನಿಂದ ಆರಂಭಿಸಿ ವಂಶಾವಳಿ, ಪ್ರಕೃತ ರಾಜನ ವರ್ಣನೆ, ದತ್ತಿಯ ಪ್ರಸಂಗ, ಕಾಲ, ದತ್ತಿಯ ವಿಷಯ, ದಾನರಕ್ಷಣೆಯ ಶ್ಲೋಕಗಳು ಇವು ವಿಸ್ತಾರವಾಗಿ ಕೊಡ ಲ್ಪಡುತ್ತವೆ. ಉದಾಹರಣೆಗಾಗಿ ಈ ಮನೆತನದ ಒಕ್ಕಣಿಕೆಯುಳ್ಳ ಒಂದು ಶಾಸನದ ಭಾಗವನ್ನು ಇಲ್ಲಿ ಕೊಡುತ್ತೇವೆ.

ಶಿಗ್ಗಾವಿಯ ಶಾಸನ

೧ ಸ್ವಸ್ತ್ಯಮೋಘವರ್ಷ ಶ್ರೀಪೃಥಿವೀ ವಲ್ಲಭ ಮಹಾ-
೨ ರಾಜಾಧಿರಾಜ ರಾಜಪರಮೇಶ್ವರ ಭಟರರ ರಾ-
೩ ಜ್ಯಾಭಿವೃದ್ಧಿ ಯೊಳ್ಶಕ ನೃಪಕಾಲಾತೀತ ಸಂವ-
೪ ತ್ಸರ ಶತಂಗಳೆಟ್ನೂಱೆಣ್ಭತ್ತೇೞನೆಯ ಪಾರ್ತ್ಥಿ-
೫ ವ ಸಂವತ್ಸರಂ ಪ್ರವರ್ತ್ತಿಸೆ ಪುರಿಗೆರೆ ನಾಡ ಕು-

(Karnataka Inscriptions vol. I no. 13)

ರಾಷ್ಟ್ರಕೂಟರ ತಾಮ್ರ ಶಾಸನಗಳಲ್ಲಿ ಈ ಕೆಳಗಿನ ಮಂಗಲ ಶ್ಲೋಕವು ಬರುತ್ತದೆ:—

ಸವೋಽವ್ಯಾದ್ವೇಧಸಾ ಧಾಮ ಯನ್ನಾಭಿಕಮಲಂಕೃತಂ ।
ಹರಶ್ಚ ಯಸ್ಯ ಕಾಂತೇಂದು ಕಲಯಾ ಕಮಲಂಕೃತಂ ॥

ಆಮೇಲೆ ವಂಶಾವಳಿಯು ಆಳುವ ರಾಜನ ವರೆಗೆ ವಿಸ್ತಾರವಾಗಿ ಕೊಡಲ್ಪಡುತ್ತದೆ.

ಕ್ರಿ. ಶ. ೪ನೆಯ ಶತಮಾನದಿಂದ ೧೦ ನೆಯ ಶತಕದವರೆಗೆ ಮೈಸೂರು ಪ್ರಾಂತದಲ್ಲಿ ಆಳಿದ ಗಂಗರಾಜರ ಒಕ್ಕಣಿಕೆಯನ್ನು ಅವರ ಶಾಸನಗಳಿಂದ ತೆಗೆದು ಇಲ್ಲಿ ಕೊಡುತ್ತೇವೆ:—

ಜಿತಂ ಭಗವತಾ ಗತಘನ ಗಗನಾಭೇನ ಪದ್ಮನಾಭೇನ । ಶ್ರೀಮಜ್ಜಾಹ್ನವೇಯ ಕುಲಾಮಲವ್ಯೋಮಾವ ಭಾಸನಭಾಸ್ಕರಸ್ಯ ಸ್ವಭುಜಜವಜ ಜಯು ಜನಿತಸುಜನ ಜನಪದಸ್ಯ ದಾರುಣಾರಿಗಣವಿದಾರಣ ರಣೋಪಲಬ್ಧ ವ್ರಣಭೂಷಣಸ್ಯ ಕಾಣ್ವಾಯನ ಸಗೋತ್ರಸ್ಯ ಶ್ರೀಮತ್ಕೊಂಗುಣಿವರ್ಮ್ಮಧರ್ಮಮಹಾಧಿರಾಜಸ್ಯ ಪುತ್ರೇಣ....

—ಗಂಗಮಾಧವವರ್ಮನ ಶಾಸನಕೋಟ ತಾಮ್ರಶಾಸನ
—Ep. Ind. vol. xxiv, p. 238.

೧೦ ನೆಯ ಶತಮಾನಕ್ಕೆ ರಾಷ್ಟ್ರಕೂಟರು ಸೋತು ಚಾಳುಕ್ಯಮನೆತನದ ೨ನೆಯ ತೈಲಪನಿಗೆ ಅರಸೊತ್ತಿಗೆಯನ್ನು ಬಿಟ್ಟು ಕೊಟ್ಟರು. ಶಾಸನಗಳನ್ನು ಬರೆಯುವ ಪದ್ಧತಿಯು ಹೆಚ್ಚು ಕಾವ್ಯಮಯವಾಗಿಯೂ ವರ್ಣನಾತ್ಮಕ

ವಾಗಿಯೂ ಆಯಿತು. ರಾಷ್ಟ್ರಕೂಟರ ಶಾಸನಗಳು ಸಾಮಾನ್ಯವಾಗಿ ರಾಜನನ್ನು ನಿರ್ದೇಶಿಸಿ ಅವನ ಆಳಿಕೆಯ ಕಾಲವನ್ನು ಶಕವರ್ಷದೊಡನೆ ಸೇರಿಸಿ ಹೇಳುವ ಕ್ರಮವನ್ನು ಹಾಕಿದವು. ಅದನ್ನು ಸ್ವಲ್ಪ ವಿಸ್ತರಿಸಿ ಕಲ್ಯಾಣದ ಚಾಳುಕ್ಯರು ಬರೆಯಹತ್ತಿದರು. ಇವರ ಶಾಸನಗಳು ಕನ್ನಡ, ತೆಲಗು, ಸಂಸ್ಕೃತಗಳಲ್ಲಿ ಹೇರಳವಾಗಿ ಸಿಕ್ಕುತ್ತವೆ. ಗದ್ಯಪದ್ಯಗಳೆರಡೂ ಹೆಚ್ಚಾಗಿ ಬಳಸಲ್ಪಡುತ್ತವೆ. ಶಾಸನಗಳ ಅಳತೆಯು ೫ ಸಾಲಿನಿಂದ ನೂರಾರು ಸಾಲುಗಳವರೆಗೆ ಹಬ್ಬಿತು. ಮಾದರಿಯ ಒಂದು ಶಾಸನದ ಭಾಗವನ್ನು ಇದರಡಿ ಕೊಡುತ್ತೇವೆ.

ಸ್ವಸ್ತಿ॥ ಸಮಸ್ತಭುವನಾಶ್ರಯ ಶ್ರೀಪೃಥ್ವೀವಭ ಮಹಾರಾಜಾಧಿರಾಜಂ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀ ಮದ್ಭುವನೈಕಾಮಲ್ಲ ದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ತತ್ಪಾದಪದ್ಮೋಪಜೀವಿ....

ಈ ಒಕ್ಕಣಿಕೆಯಲ್ಲಿ ರಾಜನ ಹೆಸರು ಮಾತ್ರ ಕಾಲಕ್ಕೆ ತಕ್ಕಂತೆ ಬದಲು ಮಾಡುವದುಂಟು. ಚಾಳುಕ್ಯರ ತರುವಾಯ ಕಲ್ಯಾಣದಲ್ಲಿ ಆಳಿದ ಕಳಚುರ್ಯರ ಒಕ್ಕಣಿಕೆಯು ಹೀಗೆ ಉಂಟು:—

ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಕಾಳಾಂಜರಪುರವರಾಧೀಶ್ವರಂ ಡಮರುಗ ತೂರ್ಯ್ಯನಿರ್ಗೋಷಣಂ ಪರಚಕ್ರಭೀಷಣಂ ಶ್ರೀಮತ್ಕಳಚುರ್ಯ ಭುಜಬಳ ಚಕ್ರವರ್ತಿ ತ್ರಿಭುವನ ಮಲ್ಲದೇವ ವಿಜಯರಾಜ್ಯ....

ಚಾಳುಕ್ಯರ ಮಾಂಡಲಿಕರಾಗಿದ್ದು ಆ ಮೇಲೆ ಮಹಾರಾಜರೆಂದು ಹೆಸರಾದ ಯಾದವ, ಹೊಯ್ಸಳ ಮನೆತನಗಳ ಲಿಪಿಗಳಲ್ಲಿಯೂ ಇದೇ ರೀತಿಯು ಅನುಸರಿಸಲ್ಪಡುತ್ತದೆ. ಇಷ್ಟರಲ್ಲಿ ಲಿಪಿಯಲ್ಲಿ ಬಹಳೇ ವ್ಯತ್ಯಾಸಗಳು ತಲೆದೋರಿದವು. ಬಾದಾಮಿಯ ಚಲುಕ್ಯರ ಕಾಲದಲ್ಲಿ ಲಂಬ ಕಾಟಕೋನ ಆಕಾರದ ಅಕ್ಷರಗಳು ರಾಷ್ಟ್ರಕೂಟರ ಕಾಲದಲ್ಲಿ ಚದರ (Square) ಆಕಾರವನ್ನು ಹೊಂದಿ ಸ್ಪಷ್ಟವಾಗಿಯೂ ಸ್ಫುಟವಾಗಿಯೂ ಕೊರೆಯಲ್ಪಡುತ್ತಿದ್ದವು. ಈ ಚತುರಸ್ರ ಆಕಾರವು ಬರಬರುತ್ತ ಅವಸರದ ಕೈಬರಹದ ಯಾಸಿ

(slanting) ಆಯಿತು. ಕಲ್ಯಾಣಿ ಚಾಳುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಆಳಿಕೆಯ ಪೂರ್ವಭಾಗದ ವರೆಗೆ ಈ ಮಾದರಿಯನ್ನು ಕಾಣಬಹುದು. ಮುಂದೆ ವರ್ತುಲಾಕಾರದ ಮುದ್ದು ಮುದ್ದಾದ ಅಕ್ಷರಗಳು ಕೊರೆಯಲ್ಪಟ್ಟವು. ಹೊಯ್ಸಳ, ರಟ್ಟ, ಗುತ್ತ, ಕದಂಬರ ಲಿಪಿಗಳು ಬಹಳ ಸುಂದರವಿರುವವು. ಉತ್ತರಕರ್ನಾಟಕದ ಮೇಲ್ಭಾಗದಲ್ಲಿ ಆಳುತ್ತಿದ್ದ ಯಾದವರ ಲಿಪಿಗಳ ಅಕ್ಷರಗಳು ದೇಶದ ಪ್ರಭಾವಕ್ಕೊಳಗಾಗಿ ಕೆಡುತ್ತ ಬಂದವು. ಅದರಂತೆ ಮೈಸೂರಲ್ಲಿ ಹೊಯ್ಸಳರ ನಂತರ ಬಂದ ವಿಜಯನಗರದ ಅರಸರ ಲಿಪಿಗಳೂ ಅಂದಗೇಡಿಗಳಾದವು. ಈ ಬದಲಾವಣೆಗೆ ಅನೇಕ ಕಾರಣಗಳುಂಟು. ಅವುಗಳನ್ನು ವಿಮರ್ಶಿಸುವದು ಇಲ್ಲಿ ಪ್ರಸಕ್ತವಲ್ಲ.

ಹೊಯ್ಸಳ ಮತ್ತು ಯಾದವರ ಶಾಸನಗಳ ಒಕ್ಕಣಿಕೆಯು ಸಾಮಾನ್ಯವಾಗಿ ಏಕರೂಪವಾಗಿರುತ್ತವೆ. ಇದರಡಿ ಅವುಗಳನ್ನು ನಿರ್ದೇಶಿಸಿದೆ.

ಯಾದವ:—

" ಸಮಸ್ತಪ್ರಶಸ್ತಿ ಸಹಿತಂ ಸಮಧಿಗತಪಂಚಮಹಾಶಬ್ದ ದ್ವಾರಾವತೀ ಪುರವರಾಧೀಶ್ವರರುಂ ಶ್ರೀವಿಷ್ಣುವಂಶೋದ್ಭವರುಂ ಸುವರ್ಣಗರುಡಧ್ವಜರುಂ ಯಾದವಕುಳ ಕಮಳ ಕಳಿಕಾ ವಿಕಾಸಭಾಸ್ಕರರುಂ ಯರಿರಾಯ ಜಗಝಂಪ ಮಾಳವರಾಯಮದನ ತ್ರಿಣೇತ್ರ ಗೂರ್ಜ್ಜರರಾಯ ಭಯಂಕರಂ ಕೊಂಕಣ ರಾಯಭಯಜ್ವರಂ ಚೋಳರಾಯ ದಿಶಾಪಟ್ಟನು ತೆಲುಂಗರಾಯ ಸ್ಥಾಪನಾಚಾರ್ಯ ಯರಿಬಳ ತ್ರಿಪುರ ತ್ರಿಣೇತ್ರಂ ವೇದೋದ್ಧಾರಕಂ ನಿಖಿಳಧರಾಭಾರಂ ರಾಜಮನೋಜಂ ಯಿತ್ಯಾದಿ ನಾಮಾವಳೀ ಸಮಾಳಕ್ರಿತ ಭುಜಬಳಪ್ರೌಢ ಪ್ರತಾಪ ಚಕ್ರವರ್ತ್ತಿ ಶ್ರೀ ಕಂನ್ಧರರಾಯ ರಾಜ್ಯೋದಯ....

ಹೊಯ್ಸಳ:—

ಇವರೂ ದ್ವಾರಾವತೀ ಪುರವರಾಧೀಶ್ವರರೆಂದು ಹೇಳಿಕೊಳ್ಳುತ್ತಾರೆ.

ವಿಜಯನಗರದ ಶಾಸನಗಳು ನಂದಿನಾಗರಿ, ಕನ್ನಡ, ತೆಲಗು, ತಮಿಳು, ಗ್ರಂಥ ಲಿಪಿಗಳಲ್ಲಿ ಬರೆಯಲ್ಪಟ್ಟಿವೆ. ಅವರ ರಾಜ್ಯವು ಪೂರ್ವ, ಪಶ್ಚಿಮ, ದಕ್ಷಿಣ ಸಮುದ್ರದ ಕರೆಯನ್ನು ಆವರಿಸಿಕೊಂಡಿತ್ತು. ಭಾಷೆ ಸಂಸ್ಕೃತ, ಕನ್ನಡ, ತೆಲಗು, ತಮಿಳು ಇವರಲ್ಲಿ ಮೂರು ಅಥವಾ ನಾಲ್ಕು ಮನೆತನಗಳು ಆಳಿದ್ದರಿಂದ ಅವರವರ ಒಕ್ಕಣಿಕೆಗಳು ಧರ್ಮ ಇಲ್ಲವೆ ಮತಗಳನ್ನು ಅನು

ಸರಿಸಿ ಭಿನ್ನವಾಗಿವೆ. (೧) ಸಂಗಮ ಮನೆತನ:—ಶೈವ. (೨) ಸಾಳ್ವ:— ವೈಷ್ಣವ. (೩) ತುಳುವ ವೈಷ್ಣವ. (೪) ಕರ್ಣಾಟ:— ವೈಷ್ಣವ ಅವರ ಶಾಸನಗಳ ಕೆಲ ಭಾಗಗಳನ್ನು ಪ್ರತ್ಯೇಕವಾಗಿ ದಿಗ್ದರ್ಶನ ಮಾಡುತ್ತೇವೆ.

ಮರಾಠಾ ಮತ್ತು ಆಧುನಿಕ ಕಾಲದ ಶಾಸನಗಳಲ್ಲಿ ಈಗಿನ ದಸ್ತೈವಜಿನ (Paper Document) ಕ್ರಮವೇ ಕಾಣುತ್ತದೆ. ಅಥವಾ ಬರಬರುತ್ತ ಶಾಸನಗಳು ವ್ಯವಹಾರಕ್ಕೆ ಮಾತ್ರ ಉಪಯೋಗಿಸಲ್ಪಟ್ಟು, ಅವುಗಳಲ್ಲಿದ್ದ ಕಾವ್ಯಮಯ ಅಂಶವು ಹೋಗಿ ಈಗಿನ ಕಾಲದ ದಸ್ತೈವಜಿನ ರೂಪಕ್ಕೆ ಮೂಲಗಳಾದವೆಂದು ಹೇಳಬಹುದು.

ಈ ಮೇಲಿನ ವಿವರಣೆಯಿಂದ ಶಾಸನಗಳನ್ನು ಬರೆಯುವ ಪದ್ಧತಿಯು ಮೊದಲು ವ್ಯವಹಾರಕ್ಕಾಗಿ ಇದ್ದರೂ ಅದರಲ್ಲಿ ಉಪಯೋಗಿಸಲ್ಪಟ್ಟ ಗದ್ಯ ಪದ್ಯಗಳು ಕಾವ್ಯಮಯವಾಗಿಯೂ ಸುಂದರ ಅಲಂಕಾರಾದಿ ಭೂಯಿಷ್ಟವಾಗಿಯೂ ಇದ್ದವು. ಮುಂದೆ ಅವು ವ್ಯವಹಾರಕ್ಕೆ ಮಾತ್ರ ಇಳಿದು ತಮ್ಮಲ್ಲಿದ್ದ ಸೌಂದರ್ಯವನ್ನು ಕಳೆದುಕೊಂಡವು ಎಂಬುದು ಒಡೆದು ಕಾಣುತ್ತದೆ. ಈ ವಿಧಾನವು ಹಿಂದುಸ್ತಾನದ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ, ಕಾವ್ಯ ಮುಂತಾದ ಲಲಿತ ಕಲೆಗಳಿಗೂ ಅನ್ವಯಿಸುತ್ತದೆ. ಈ ರೀತಿ ಶಾಸನಗಳ ಸಾಮಾನ್ಯ ಸ್ವರೂಪವನ್ನು ಪರಿಚಯ ಮಾಡಿಕೊಂಡು ಅವುಗಳ ಅಭ್ಯಾಸದಿಂದ ತಿಳಿದು ಬಂದ ಸಂಗತಿಗಳನ್ನು ಮುಂದೆ ಸಂಕ್ಷೇಪವಾಗಿ ವಿವರಿಸುವೆವು.

೩ ಶಾಸನಗಳ ಮಹತ್ವ

ಇತಿಹಾಸ ರಚನೆಗೆ ಶಾಸನಗಳ ಮಹತ್ವವು ವಿಶೇಷವಾಗಿದೆ. ಪ್ರಾಚೀನ ವೃತ್ತಗಳನ್ನು ತಿಳಿದುಕೊಳ್ಳಲಿಕ್ಕೆ ಮುಖ್ಯ ಸಾಧನವೆಂದರೆ (೧) ವಾಙ್ಮಯ, (೨) ಶಾಸನಗಳು (೩) ಕಲಾಕೃತಿಗಳು, ನಾಣ್ಯಗಳು ಇತ್ಯಾದಿ (೪) ಪರ ದೇಶದ ಪ್ರಯಾಣಿಕರು ಬರೆದಿಟ್ಟ ವರದಿಗಳು ಮುಖ್ಯವಾಗಿವೆ. ಇವಲ್ಲದೆ (೫) ಸಾಂಸ್ಕೃತಿಕ ನಿವೇಶನಗಳ ಉತ್ಖನನದಿಂದ ಹೊರಬಿದ್ದ ಅವಶೇಷಗಳು ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಸಂಗತಿಗಳನ್ನು ಸಾಮಾನ್ಯವಾಗಿ ತಿಳಿಸಿ ಕೊಡುತ್ತವೆ. ಈ ಐದು ತೆರದ ಸಾಮುಗ್ರಿಗಳಲ್ಲಿ ಹಿಂದುಸ್ಥಾನದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ನಾಡಿನ ಇತಿಹಾಸ ಜ್ಞಾನಕ್ಕೆ ಉಪಯೋಗವುಳ್ಳ ವಾಙ್ಮಯವು ವಿಶೇಷವಾಗಿಲ್ಲ. ಸಾಮಾನ್ಯವಾಗಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಗ್ರಂಥ ಗಳು ಪೌರಾಣಿಕ ಇಲ್ಲವೆ ಧಾರ್ಮಿಕ ವಿಷಯಗಳ ಪ್ರತಿಪಾದನೆಗೆ ಮೀಸಲಾ ಗಿವೆ. ಕಾವ್ಯ ನಾಟಕಾದಿಗಳಾದರೂ ಪೌರಾಣಿಕ ವ್ಯಕ್ತಿಗಳ ಉತ್ಕರ್ಷಕ್ಕಾಗಿ ಅಥವಾ ಧರ್ಮ-ಮತ ತತ್ವಗಳ ಪ್ರತಿಪಾದನೆಗಾಗಿ ಬರೆಯಲ್ಪಟ್ಟಿವೆ. ಕಾಳಿ ದಾಸನ ಕೃತಿಗಳಲ್ಲಿ ಐತಿಹಾಸಿಕ ಅಂಶಗಳನ್ನು ಹುಡುಕಿ ತೆಗೆಯಲಿಕ್ಕೆ ಕಣ್ಣಿಗೆ ಅಂಜನ ಹಾಕಿಕೊಂಡು ಆರಿಸಿದರೂ ವ್ಯವಸ್ಥಿತವಾದ ಸಂಗತಿಗಳು ಗೊತ್ತಾ ಗುವುದಿಲ್ಲ. ಇದರಂತೆ ಕನ್ನಡ ವಾಙ್ಮಯದ ಮಾತು. ಪಂಪ-ರನ್ನರ ಕಾವ್ಯ ಗಳಲ್ಲಿ ತಮ್ಮ ಪೋಷಕರನ್ನು ಕುರಿತು ಹೇಳುವ ಕೆಲವು ಸಂದರ್ಭಗಳು ಬಂದರೂ ಅವುಗಳಿಂದ ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ವಿಷಯಗಳು ಯಥಾವತ್ತಾಗಿ ವಿವರವಾಗಿ ಗೊತ್ತಾಗುವದಿಲ್ಲ. ಈ ದೇಶದಲ್ಲಿ ಆಳಿದ ರಾಜಮನೆತನಗಳು ಯಾವವು ಅವುಗಳ ಕಾಲಮಾನಗಳು ಯಾವವು ಆಯಾ ರಾಜರು ನಾಡಿಗೂ, ಜನರಿಗೂ ತಮ್ಮ ಮನೆತನಗಳಿಗೂ ಉತ್ಕರ್ಷ ವನ್ನು ತರುವ ಯಾವ ಕೃತಿಗಳನ್ನು ಮಾಡಿದರು. ಜನರ ನಡೆನುಡಿಗಳು ಕಲಾ ಕೃತಿಗಳು-ಗುಡಿ ಗುಂಡಾರಗಳು, ಮಠ ಛತ್ರಗಳು— ಮೂರ್ತಿ-ಕೀರ್ತನೆ ಗಳು ಮೊದಲಿಂದ ಅಲ್ಲಲ್ಲಿ ದೃಷ್ಟಿಗೆ ಬೀಳುವ ಅವಶೇಷಗಳು ಯಾರ ಕಾಲ ದಲ್ಲಿ ಹೇಗೆ ಅಸ್ತಿತ್ವದಲ್ಲಿ ಬಂದವು. ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳ

ಲಿಕ್ಕೆ ಪ್ರತಿಯೊಬ್ಬನಿಗೂ ಕುತೂಹಲವಿರುತ್ತದೆ. ಅದರಂತೆ ತಮ್ಮ ತಮ್ಮ ಹಳ್ಳಿಗಳ, ಅಲ್ಲಿರುವ ಮಠಗಳ, ಮತ್ತು ಮನೆತನಗಳ ಚರಿತ್ರೆಯನ್ನು ಗೊತ್ತು ಮಾಡಿಕೊಳ್ಳಲು ಎಲ್ಲರೂ ಉತ್ಸುಕರಾಗಿರುವರು. ಈ ಉತ್ಸುಕತೆಯನ್ನು ಶಾಂತಗೊಳಿಸಲಿಕ್ಕೆ ತಕ್ಕ ಸಾಧನಗಳು ಕಲ್ಲು ಮತ್ತು ಧಾತುಮಯ ಹಲಗೆಗಳ ಮೇಲೆ ಬರೆದಿಟ್ಟ ಶಾಸನಗಳಲ್ಲದೆ ಬೇರೆ ಯಾವುವೂ ಇಲ್ಲ. ಮೇಲೆ ಹೇಳಿದಂತೆ ಕಾವ್ಯನಾಟಕಾದಿ ವಾಙ್ಮಯ ಗ್ರಂಥಗಳಲ್ಲಿ ಐತಿಹಾಸಿಕ ವಸ್ತುಗಳ ನಿರೂಪಣೆಯು ವಸ್ತುಸ್ಥಿತಿಗೆ ತಕ್ಕಂತೆ ಯಥಾರ್ಥವಾಗಿರಲಿಕ್ಕಿಲ್ಲ. ಕವಿಯು ತನ್ನ ಕೌಶಲವನ್ನು ತೋರಿಸಲಿಕ್ಕೆ ಅಥವಾ ತನ್ನ ಕಥಾ ನಿರೂಪಣೆಗೆ ಕಳೆಯೇರು ವಂತೆ ಅನೇಕ ಮಾರ್ಪಾಡುಗಳನ್ನು ಮಾಡುವನು. ಕಲಾಕೃತಿಗಳು ಮತ್ತು ನಾಣ್ಯಗಳು ತಮ್ಮ ಚರಿತ್ರೆಯನ್ನು ತಾವಾಗಿಯೇ ಹೇಳಲು ಸಮರ್ಥವಾಗುವುದಿಲ್ಲ. ಪರದೇಶದ ಪ್ರಯಾಣಿಕರು ಬರೆದಿಟ್ಟ ವರದಿಗಳು ನಂಬಲರ್ಹವಲ್ಲ. ಅವುಗಳಲ್ಲಿ ಅನೇಕ ಸಂಗತಿಗಳು ಅಪ್ರಾಮಾಣಿಕವಾಗಿದ್ದು ಹಾರಿಕೆಯ ಸುದ್ದಿಗಳು ಸೇರಿದ್ದು ಕಂಡುಬರುತ್ತದೆ. ಹುಯೆನ್‌ತ್ಸಾಂಗನು ದಕ್ಷಿಣ ಹಿಂದುಸ್ಥಾನದ ತುಂಬಾ ಸಂಚರಿಸವೆ ಪಲ್ಲವ-ಪಾಂಡ್ಯ-ಚೋಳರ ರಾಜ್ಯದ ವಿಷಯಕ್ಕೆ ಹೇಳಿದ ಸಂಗತಿಗಳು ಬರಿ ಕೇಳಿಕೆಯ ಮಾತುಗಳೆಂದೂ ಸತ್ಯವಲ್ಲವೆಂದೂ ಈಗ ಸಿದ್ಧವಾಗಿದೆ. ಆದ್ದರಿಂದ ತಾತ್ಕಾಲಿಕ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ತತ್ಕಾಲದಲ್ಲಿ ಬದಲಾಗದಂತೆ ಶಾಶ್ವತವಾದ ಸಾಮಗ್ರಿಗಳ ಮೇಲೆ ಬರೆದಿಟ್ಟ ಶಾಸನಗಳು ವಿಶ್ವಸನೀಯವಾದ ಪ್ರಬಲ ಪ್ರಮಾಣಗಳು. ಇವುಗಳನ್ನು ಬಿಟ್ಟರೆ ಹಳೆಯ ಇತಿಹಾಸವನ್ನು ಬಯಲಿಗೆ ಹಾಕತಕ್ಕ ಸಾಮಗ್ರಿಗಳಾವುವೂ ಇಲ್ಲ.

ಕ್ರಿ. ಶ. ಪೂ. ೩ನೆಯ ಶತಕದ ಮೌರ್ಯರ ಬ್ರಾಹ್ಮೀಲಿಪಿಯ ಪ್ರಾಕೃತ ಶಾಸನಗಳಿಂದ ಅಶೋಕ ಚಕ್ರವರ್ತಿಯ ಚರಿತ್ರೆಯು ತಿಳಿಯಿತು. ಅವರಾದ ಮೇಲೆ ಕರ್ನಾಟಕದಲ್ಲಿ ಆಳಿದ ಸಾತವಾಹನರೂ ಪಲ್ಲವರೂ ಅವರ ಮಾಂಡಲಿಕರಾಗಿದ್ದ ಬನವಾಸಿಯ ಕದಂಬರೂ ಇತಿಹಾಸ ರಂಗಕ್ಕೆ ಬಂದದ್ದು ಶಾಸನಗಳ ಪರಿಶೀಲನೆಯಿಂದಲೆ. ಬಾದಾಮಿಯ ಕರ್ನಾಟಕದ ಪ್ರಥಮ ಸಮ್ರಾಟನಾದ ೨ನೆಯ ಪುಲಿಕೇಶಿಯ ಧೈರ್ಯ ಶೌರ್ಯಗಳೂ ಮಹತ್ವಾಕಾಂಕ್ಷೆಯೂ ಅವನ ಐಹೊಳ್ಳಿಯ ದಿಗ್ವಿಜಯ ಪ್ರಶಸ್ತಿಯಿಂದ ಗೊತ್ತಾದವು.

ರಾಷ್ಟ್ರಕೂಟರ ಕಾಲದ ಚರಿತ್ರೆಗೆ ಜಿನಸೇನನ ಆದಿಪುರಾಣ ಗುಣಭದ್ರನ ಉತ್ತರ ಪುರಾಣ ಸೋಮದೇವ ಸೂರಿಯ ಯಶಸ್ತಿಲಕ ಚಂಪೂ ಮೊದಲಾದ ಸಂಸ್ಕೃತ ಗ್ರಂಥಗಳು ಸಹಕಾರಿಗಳಾದರೂ ರಾಜರ ವಿಷಯವಾಗಿ ಬರೆದ ಸಂಗತಿಗಳು ಪೋಷ್ಯ ಕವಿಗಳಿಂದ ಬರೆಯಲ್ಪಟ್ಟಿದ್ದರಿಂದ ಪರೀಕ್ಷಿಸದೆ ಒಪ್ಪಿ ಕೊಳ್ಳಲು ಬರುವದಿಲ್ಲ. ಶಾಸನಗಳಾದರೂ ರಾಜಾಜ್ಞೆಯಿಂದ ಹೊರಟಿದ್ದರೂ ದೇಶದ ಬೇರೆ ಬೇರೆ ಭಾಗಗಳಲ್ಲಿ ದೊರೆವ ತತ್ಕಾಲದ ತದ್ವಿಷಯದ ಲಿಪಿಗಳು ಅಸಂಖ್ಯಾತವಾಗಿ ಸಿಗುವದರಿಂದ ಅವೆಲ್ಲವುಗಳಲ್ಲಿ ಬರುವ ಸಂಗತಿಗಳನ್ನು ಪರಸ್ಪರ ಪರೀಕ್ಷೆಯಿಂದ ವ್ಯವಸ್ಥಿತಗೊಳಿಸಿ ಸತ್ಯವಾದವುಗಳನ್ನು ಮಾತ್ರ ಸ್ವೀಕರಿಸಬಹುದು. ಇದರಂತೆ ಚಾಳುಕ್ಯ, ಯಾದವ, ಹೊಯ್ಸಳ, ವಿಜಯ ನಗರದ ಕಾಲದ ವಾಙ್ಮಯ ಸಾಮಗ್ರಿಯ ಸ್ಥಿತಿ ಇರುವದು. ಇವೆಲ್ಲ ದೊಡ್ಡ ಮತ್ತು ಸಣ್ಣ ಅರಸುಮನೆತನಗಳು ಶಾಸನಗಳಿಂದಲ್ಲದೆ ಬೇರೆ ಯಾವ ಪ್ರಮಾಣ ಗಳಿಂದಲೂ ಬಯಲಿಗೆ ಬರಲು ಅವಕಾಶವಿರಲಿಲ್ಲ. ಕರ್ನಾಟಕದ ಚರಿತ್ರೆಯು ಕ್ರಿ. ಶ. ಪೂ. ೩ನೆಯ ಶತಮಾನದಿಂದ ವಿಜಯನಗರದ ರಾಜ್ಯದ ಅಳಿಗಾಲದ ವರೆಗೆ ಅಂದರೆ ೧೬ನೆಯ ಶತಕದ ಕೊನೆಯವರೆಗೆ ಅವಿಚ್ಛಿನ್ನವಾಗಿ, ರಾಜ ಕೀಯ, ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮೊದಲಾದ ವಿವಿಧ ಅಂಗಗಳಲ್ಲಿ ವೃತ್ತಗಳಿಂದ ತುಂಬಿ ಅನೂಚಾನವಾಗಿ ತನ್ನ ಗಾತ್ರವನ್ನು ಬೆಳೆಸಿಕೊಂಡದ್ದು ಶಾಸನಗಳ ಸಹಾಯದಿಂದಲ್ಲದೆ ಬೇರೆ ಯಾವುದರಿಂದಲೂ ಅಲ್ಲವೆಂದು ಧಾರಾಳವಾಗಿ ಹೇಳಬಹುದು. ಕ್ರಿ. ಶ. ೧೬ನೆಯ ಶತಕದಿಂದ ಇತ್ತ ಶಾಸನಗಳ ಯುಗವು ಹೋಗಿ ದಸ್ತೈವಜುಗಳ ಯುಗವು ಬಂದದ್ದರಿಂದ ಈಚೆಯ ೨೦೦–೩೦೦ ವರ್ಷಗಳ ಚರಿತ್ರೆಯು ಐತಿಹಾಸಿಕ ಕಾಗದ ಪತ್ರಗಳ ಮೇಲೆ ಅವಲಂಬಿಸಿದೆ. ಅವು ನಶ್ವರವೂ ವ್ಯಕ್ತಿಗತವೂ ಆಗಿರುವದರಿಂದ ಅವು ಗಳ ಸಮಗ್ರ ಸಂಗ್ರಹಕ್ಕೆ ಅವಕಾಶವಿಲ್ಲದೆ ಇತಿಹಾಸವು ಅಪೂರ್ಣವಾಗಿ ಉಳಿಯುವ ಸಂಭವವುಂಟು. ಮತ್ತು ಕಾಗದ ಪತ್ರಗಳು ನಷ್ಟವಾಗುವ ಪ್ರಸಂಗದಲ್ಲಿ ಅವುಗಳ ನಕಲುಗಳನ್ನು ತಯಾರಿಸಿಡುವದರಿಂದ ನಕಲುಗಳ ಬೆಲೆಯು ಇತಿಹಾಸ ರಚನೆಗೆ ಅಷ್ಟೊಂದು ಮಹತ್ವದ್ದಾಗಲಾರದು. ಆದ್ದರಿಂದ ಶಾಸನಗಳೇ ತತ್ಕಾಲದ ಇತಿಹಾಸಕ್ಕೆ ಅಬಾಧಿತವಾದ ಪ್ರಮಾಣಗಳೆಂದು ತಿಳಿಯಬೇಕು.

ಇನ್ನು ಶಾಸನಗಳಲ್ಲಿಯೂ ಕೃತಕ (forgeries) ಗಳು ಉಂಟು. ಅವುಗಳನ್ನು ಸೂಕ್ಷ್ಮ ಪರೀಕ್ಷೆಯಿಂದ ತ್ಯಜಿಸಬೇಕು. ಈ ಕೆಲಸವು ಕಷ್ಟ ಸಾಧ್ಯವಾದರೂ ಕೆಲಸಾಮಾನ್ಯ ತತ್ವಗಳಿಂದ ಅವುಗಳನ್ನು ವಿಂಗಡಿಸಬಹುದು. ಈ ತತ್ವಗಳಾವುವೆಂದರೆ:—

(೧) ಲಿಪಿಸ್ವರೂಪ (Palaeography):— ಹಳೆಯ ಶಾಸನದ ಪ್ರತಿರೂಪ (ನಕಲು) ಎಂದು ಗೊತ್ತಾದ ಪಕ್ಷವೊಂದನ್ನು ಬಿಟ್ಟು ಉಳಿದೆಡೆಗಳಲ್ಲಿ ಲಿಪಿಸ್ವರೂಪವು ಕಾಲಮಾನದ ನಿರ್ಧಾರಕ ಅಂಶವೆಂದು ಧಾರಾಳವಾಗಿ ಹೇಳಬಹುದು.

(೨) ಭಾಷಾಸ್ವರೂಪ:— ಆಯಾಕಾಲದ ಭಾಷೆಯ ಅವಸ್ಥೆಯನ್ನು ಬಲ್ಲವರು ಶಾಸನವು ಅಲ್ಲಿ ನಿರ್ದಿಷ್ಟವಾದ ಕಾಲದ ಭಾಷೆಯಲ್ಲಿರುವದೇ ಇಲ್ಲವೇ ಎಂಬುದನ್ನು ನಿರ್ಧರಿಸಬಹುದು. ಇಲ್ಲದಿದ್ದರೆ ಅದರ ನೈಜಾಂಶದ ಬಗ್ಗೆ ಸಂಶಯಕ್ಕೆ ಆಸ್ಪದವುಂಟು.

(೩) ನಿರ್ದಿಷ್ಟವಾದ ಕಾಲ:— ತಿಥಿನಿರ್ದೇಶದಲ್ಲಿ ಅಸಂಬದ್ಧವಾದ ವ್ಯತ್ಯಾಸವು ಕಂಡುಬಂದರೆ ಸಂಶಯಕ್ಕೆ ಎಡೆಯುಂಟು. ಕ್ರಿ. ಶ. ೫ನೆಯ ಶತಕದ ವರೆಗೆ ೧೨ ವರ್ಷದ ಬಾರ್ಹಸ್ಪತ್ಯ ಮಾನವು ಪ್ರಚಾರದಲ್ಲಿತ್ತು. ಆಗ ಚಾಂದ್ರಮಾನದ ಚೈತ್ರ, ವೈಶಾಖ ಮುಂತಾದ ತಿಂಗಳುಗಳ ಹೆಸರಿಗೆ ಮಹಾ ಎಂಬ ಪದವನ್ನು ಜೋಡಿಸಿ ಮಹಾಚೈತ್ರ, ಮಹಾವೈಶಾಖ ಎಂದು ವರ್ಷಗಳನ್ನು ನಿರ್ದೇಶಿಸುವ ಸಂಪ್ರದಾಯವಿತ್ತು. ಇದಕ್ಕೆ ವಿರುದ್ಧವಾಗಿ ಆಗಿನ ಶಾಸನದಲ್ಲಿ ಶಕ ಇಲ್ಲವೆ ಶಾಲಿವಾಹನ ಶಕವನ್ನು ಈಗಿನಂತೆ ಮಾಸ, ತಿಥಿ, ವಾರ, ನಕ್ಷತ್ರಗಳನ್ನು ಸೇರಿಸಿಕೊಟ್ಟರೆ ಆ ಶಾಸನವು ಇತ್ತೀಚೆಯ ಕೃತಕ ಶಾಸನವೆಂದು ತಿಳಿಯಬೇಕಾಗುವದು.

(೪) ಐತಿಹಾಸಿಕ ಪ್ರತಿಕೂಲಗಳು:—ಶಾಸನದ ಕಾಲದಲ್ಲಿ ಜರುಗಲಶಕ್ಯವಾದ ಸಂಗತಿಗಳನ್ನು ಒಳಗೊಂಡಿದ್ದರೆ, ಅದನ್ನು ಸಮರ್ಪಕವಾಗಿ ವ್ಯವಸ್ಥಿತಮಾಡಲು ಸಾಧ್ಯವಾಗದಿದ್ದರೆ, ಅಂಥ ಶಾಸನವು ಕೃತಕವೆಂದು ತಿಳಿಯಬೇಕು. ಈ ಸಾಮಾನ್ಯ ತತ್ವಗಳಿಂದ ಕೃತಕವೆಂದು ನಿರ್ಧರಿಸಲ್ಪಟ್ಟ ಶಾಸನಗಳು ಸರ್ವಥಾ ಅಪ್ರಮಾಣ ಕೋಟಿಯಲ್ಲಿ ಸೇರಿಸಲ್ಪಡಬಾರದು. ಖೊಟ್ಟಿಮಾಡಿದ ಕಾಲಕ್ಕೆ ಅಲ್ಲಿ ಕೊಡಲ್ಪಟ್ಟ ಐತಿಹಾಸಿಕ

ಸಂಗತಿಗಳು ದಂತಕಥೆಯ ಮಾಲಿಕೆಯಲ್ಲಿ ಸೇರಿಸಲ್ಪಡಬಹುದು. ಅಂತು ಶಾಸನಗಳು ಉಳಿದ ಸಾಮಗ್ರಿಗಳಿಗಿಂತ ಹೆಚ್ಚು ಪ್ರಮಾಣಭೂತವಾದ ಇತಿಹಾಸದ ಆಕರಗಳೆಂದು ಈ ಮೇಲಿನ ವಿವರಣೆಯಿಂದ ಗೊತ್ತಾಗದೆ ಇರದು.

ಮೇಲೆ ಹೇಳಿದಂತೆ ಶಾಸನಗಳ ಮಹತ್ವವು ಬಹುಮುಖವಾಗಿರುವದು. ರಾಜಕೀಯ ಚರಿತ್ರೆಯಲ್ಲದೆ ಜೈನ, ಬೌದ್ಧ, ಶೈವ, ವೈಷ್ಣವ ಮುಂತಾದ ಧರ್ಮಪಂಗಡಗಳ ಚರಿತ್ರೆಯೂ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಯೂ ಗೊತ್ತಾಗುವವು. ಶ್ರವಣಬೆಳ್ಗೊಳದ ಶಾಸನಗಳು ದಿಗಂಬರ ಜೈನಧರ್ಮದ ಪಂಗಡಗಳ ಚರಿತ್ರೆಗೆ ವಿಪುಲವಾದ ಅನ್ನವನ್ನು ಒದಗಿಸಿಕೊಡುತ್ತವೆ. ಮೈಸೂರು ದೇಶದ ಬಳ್ಳಿಗಾವೆಯ ಶಾಸನಗಳಿಂದ ಪಂಚಮಠ ಸ್ಥಾನಗಳೂ ವಿದ್ಯಾವಿತರಣವೂ ೧೨ನೆಯ ಶತಮಾನದ ಬೌದ್ಧರ ವಿಹಾರಗಳ ಅಸ್ತಿತ್ವವೂ ಗೊತ್ತಾಗುವವು. ತಾಳಗುಂದ ಶಾಸನದಿಂದ ೪ನೆಯ ಶತಮಾನದಲ್ಲಿ ಕಂಚಿಯು ಘಟಿಕಾಸ್ಥಾನವಾಗಿತ್ತೆಂದು ತಿಳಿಯುತ್ತದೆ. ೧೨ನೆಯ ಶತಮಾನದ ಕಡಲೇವಾಡಲಿಪಿಯಿಂದ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ಭೀಮಾನದಿಯ ದಂಡೆಗಿದ್ದ ಕಡಲೇವಾಡವು ಮಹಾ ಘಟಿಕಾಸ್ಥಾನವಾಗಿತ್ತೆಂದು ಗೊತ್ತಾಗುತ್ತದೆ. ಹೈದರಾಬಾದ ಪ್ರಾಂತದಲ್ಲಿದ್ದ ನಾಗಾಯಿಯ ಲಿಪಿಯಲ್ಲಿ ೧೧-೧೨ ನೆಯ ಶತಮಾನದಲ್ಲಿ ಶಿಕ್ಷಣ ಪದ್ಧತಿಯು ಯಾವ ತೆರದ್ದಿತ್ತೆಂಬುದು ತಿಳಿಯುವುದು.

ಚಾಳುಕ್ಯ ೫ನೆಯ ವಿಕ್ರಮಾದಿತ್ಯನ ಶಕ ೯೩೩ ನೆಯ ಕೋಟವುಮಚಿಗೆಯ ಶಾಸನವೂ ಆ ಕಾಲದ ಶಿಕ್ಷಣದ ಕ್ರಮದ ಬಗ್ಗೆ ಕೆಲವು ಮಹತ್ವದ ಸಂಗತಿಗಳನ್ನು ಕೊಡುತ್ತದೆ.

ವಿಜಾಪೂರ ಜಿಲ್ಹೆಯ ಹುನಗುಂದ ತಾಲೂಕಿನ ಐಹೊಳ್ಳಿಯು ದಕ್ಷಿಣ ಹಿಂದುಸ್ಥಾನದ ವಣಿಕ್ಸಂಘದ ಕೇಂದ್ರವಾಗಿತ್ತೆಂದೂ ಆ ಸಂಘದ ಆಡಳಿತಕ್ಕೆ ಕರ್ನಾಟಕ, ಆಂಧ್ರ ಮತ್ತು ದ್ರಾವಿಡ (ತಮಿಳು) ದೇಶಗಳು ಒಳಪಟ್ಟಿದ್ದವೆಂದೂ ಶಾಸನಗಳಿಂದ ತಿಳಿಯಬರುತ್ತದೆ. ಈ ವಣಿಕ್ಸಂಘದ ವರ್ಣನೆಯು ಸಾಮಾನ್ಯವಾಗಿ ಹೀಗೆ ಬರುತ್ತದೆ:—

" ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚ ಶತವೀರ ಶಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯ ಶೌಚಾಚಾರ ಚಾರುಚಾರಿತ್ರ

ನಯವಿನಯರುಂ ಬಲದೇವ ವಾಸುದೇವ ಖಂಡಳೀವಮೌಳಿ ಭದ್ರ ವಂಶೋದ್ಭವರುಂ ಭಗವತೀ ದೇವಿಲಬ್ಧ ವರಪ್ರಸಾದರುಮಪ್ಪ ಶ್ರೀಮದಯ್ಯಾವೊಳೆಯಯ್ನೂರ್ಬ್ಬರ್ಸ್ವಾರ್ಮಿಗಳು ಮುಖ್ಯ ಶ್ರೀಮತು ಸಮಯ ಚಕ್ರವರ್ತಿ ಸೆಟ್ಟಿಗುತ್ತರುಂ ಸ್ಥಳ ಸಮಸ್ತ ಮುಂಮರಿದಂಡಂಗಳುಂ ಕೂಡಿ ಮೂಱು ಸಾಸಿರದ ನಾಲ್ಕುಂ ಪಟ್ಟಣದ ಸೆಟ್ಟಿಗುತ್ತರುಂ ಸಮಸ್ತ ವುಭಯ ನಾನಾದೇಶಂಗಳುಂ ಬಿರುದರುಂ ಬೀರವಣಿಗರುಂ ಗವಱೆಗಳುಂ ಗಾತ್ರಿಗರುವಯ್ತೊಕ್ಕಲುಂ ಸಮಸ್ತ ನಖರಂಗಳುಂ ಹಿರಿಸಿಂಗಿಯಲು ಶ್ರೀಮತು ಹಬ್ಬೇಶ್ವರ ದೇವರ ದೇವಾಯತನದೊಳಶೇಷಂ ಬಯಸಣಿಗೆಯಾಗಿರ್ದು........"

ಶಿರಸಂಗಿ ಶಾಸನ, Karnatak Inscrptions Vol. I, P. 25

ತಮಿಳು ಶಾಸನಗಳಲ್ಲಿ ಈ ಐಹೊಳೆಯ ಸಂಘವು 'ಅಯ್ಯಾವೊಳೆಯ ಯ್ನೂಟ್ರುವರ್ ಸ್ವಾಮಿಗಳ್' ಎಂದು ಉಲ್ಲೇಖಿಸಲ್ಪಡುತ್ತದೆ.

ಶಾಸನಗಳ ಭಾಷಾಭೇದಗಳು

ಶಾಸನಗಳ ಅತ್ಯಂತ ಮಹತ್ವದ ಕಾಣಿಕೆಯೆಂದರೆ ಅಲ್ಲಿ ಉಪಯೋಗಿಸಲ್ಪಟ್ಟ ಭಾಷೆ. ಕಾಲಕ್ರಮಕ್ಕೆ ತಕ್ಕಂತೆ ಭಾಷೆಯು ಯಾವ ಅಂಶಗಳಲ್ಲಿ ಬದಲಾವಣೆಗಳನ್ನು ಹೊಂದುತ್ತಿತ್ತೆಂಬುದು ಶಾಸನಗಳ ಅಭ್ಯಾಸದಿಂದ ಒಡೆದು ಕಾಣುತ್ತದೆ. ಶಾಸನಗಳು ಜನರ ತಿಳುವಳಿಕೆಗಾಗಿ ಕೆತ್ತಲ್ಪಟ್ಟಿದ್ದರಿಂದ ಆಯಾ ಕಾಲದ ಬಳಕೆಯ ಮಾತುಗಳು ಅಲ್ಲಿ ಉಪಯೋಗಿಸಲ್ಪಟ್ಟಿವೆ. ಒಂದು ಅಂಶವನ್ನು ಇಲ್ಲಿ ಗಮನಿಸತಕ್ಕದ್ದು:—ಆರಂಭದಲ್ಲಿ ಶಾಸನಗಳು ಗದ್ಯದಲ್ಲಿ ಬರೆಯಲ್ಪಟ್ಟವು. ಭಾಷೆ ಮೊದಲು ಪ್ರಾಕೃತವಾಗಿತ್ತು. ಆಮೇಲೆ ಸಂಸ್ಕೃತ ಮತ್ತು ಕನ್ನಡ ಉಪಯೋಗಿಸಲ್ಪಟ್ಟವು. ಎಲ್ಲಕ್ಕೂ ಹಳೆಯ ಕನ್ನಡ ಶಾಸನ ಮೈಸೂರು ದೇಶದ ಸು. ಕ್ರಿ. ಶ. ೪೫೦ರ ಹಲ್ಮಿಡಿ ಶಾಸನ. ಅದಾದಮೇಲೆ ಶಕ ೫೦೦ (ಕ್ರಿ. ಶ. ೫೭೮) ರ ಬಾದಾಮಿಯ ೩ನೆಯ ಗವಿಯಲ್ಲಿರುವ ಮಂಗಲೀಶನ ಶಾಸನ. ಕನ್ನಡ ಭಾಷೆಯ ಅವಸ್ಥಾ ಭೇದಗಳನ್ನು ಶಾಸನಗಳ ಅಭ್ಯಾಸದಿಂದ ಗುರುತಿಸಬಹುದು. ಕ್ರಿ. ಶ. ೯ನೆಯ ಶತಮಾನದ ನೃಪತುಂಗನಿಂದ ರಚಿತವಾದ ಕವಿರಾಜಮಾರ್ಗವೇ ಈಗ ಗೊತ್ತಿದ್ದ ಎಲ್ಲಕ್ಕೂ ಹಳೆಯ ಗ್ರಂಥ. ಅದರ ಹಿಂದಿನ ಕನ್ನಡ ಭಾಷೆಯ ಸ್ವರೂಪವನ್ನು ಶಾಸನ

ಗಳಿಂದ ಮಾತ್ರ ತಿಳಿಯಲು ಸಾಧ್ಯ. ಹಲ್ಮಿಡಿ ಶಾಸನ (ಕ್ರಿ. ಶ. ೪೫೦) ದ ಮುಂಚೆ ಕನ್ನಡ ಭಾಷೆ ಇದ್ದಿಲ್ಲವೆಂತಲ್ಲ. ಗಂಗಮನೆತನದ ೪ನೆಯ ಶತಕದ ಲಿಪಿಗಳಲ್ಲಿಯೂ ಕದಂಬರ ಸಂಸ್ಕೃತ ಲಿಪಿಗಳಲ್ಲಿಯೂ ಕನ್ನಡ ಶಬ್ದಗಳು ಕಂಡುಬರುತ್ತವೆ. ಅಲ್ಲಿ ಬರುವ ಕಾಲವಂಗ (ಹಲಸಿತಾಮ್ರಶಾಕ), ಕೋಳಾಲ, ಸುದ್ದಿ ಕುಂದೂರ ವಿಷಯ, ಕೋಳನಲ್ಲೂರು, ವಳ್ಳಾವಿವಿಷಯ, ಮುಟ್ಟಿಗೆ ಮುಂತಾದ ಊರಿನ ಇಲ್ಲವೆ ನಾಡಿನ ಹೆಸರುಗಳು ಕನ್ನಡವಿರುತ್ತವೆ. ಕ್ರಿ. ಶ. ೫ನೆಯ ಶತಮಾನದಿಂದ ೯ನೆಯ ಶತಮಾನದ ಅವಧಿಯ ಕನ್ನಡ ಪೂರ್ವದ ಹಳಗನ್ನಡವೆಂದೂ ಆಮೇಲೆ ಹಳಗನ್ನಡವೆಂದೂ ಎರಡು ಭಾಗಗಳನ್ನು ಮಾಡಿದರೆ ಕವಿರಾಜಮಾರ್ಗದ ಕಾಲಕ್ಕೆ ಪೂರ್ವದ ಹಳಗನ್ನಡವು ಹೋಗಿ ಹೊಸಗನ್ನಡವು ಕಾಲು ಚಾಚಿತ್ತೆಂದು ಹೇಳಬಹುದು.

೪ ಬರೆಹದ ಪಾತ್ರಗಳು

ಹಿಂದುಸ್ತಾನದಲ್ಲಿ ಬರೆಹವು ಬಹು ಪ್ರಾಚೀನ ಕಾಲದಿಂದಲೂ ಪ್ರಚಾರದಲ್ಲಿತ್ತೆಂದು ಮೇಲೆ ಹೇಳಿದ್ದೇವೆ. ಕ್ರಿ. ಶ. ಪೂ. ೩೦೦೦ ವರ್ಷಗಳ ಮೊಹೆಂಜೊದಾರುವಿನ ಮೊಹರುಗಳ ಮೇಲೆ ಅಕ್ಷರಗಳು ಬರೆಯಲ್ಪಟ್ಟಿದ್ದು ಅವುಗಳನ್ನು ಇನ್ನೂ ಸರಿಯಾಗಿ ಓದಿಲ್ಲ. ಆದಾದಮೇಲೆ ಮೌರ್ಯರ ಶಾಸನಗಳೇ ಅತ್ಯಂತ ಪ್ರಾಚೀನವಾದವು. ಸಾಮಾನ್ಯವಾಗಿ ಶಾಸನಗಳನ್ನು ವಿವಿಧವಾದ ಪಾತ್ರಗಳಮೇಲೆ ಬರೆದಿಡುವ ಸಂಪ್ರದಾಯವಿತ್ತು. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ನಿರೂಪಿಸುವೆವು:— ಬಹುಕಾಲ ಬಾಳುವ ವಸ್ತುಗಳನ್ನೇ ಉಪಯೋಗಿಸುತ್ತಿದ್ದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

(೧) ಕಲ್ಲು
(೨) ಧಾತು
(೩) ಸ್ಫಟಿಕ,
(೪) ಹಸ್ತಿದಂತ
(೫) ಸುಟ್ಟ ಮಣ್ಣಿನ ಪಾತ್ರೆಗಳು
(೬) ಬಟ್ಟೆ, ತೊಗಲು,
(೭) ಬಹುಕಾಲ ಬಾಳುವ ಗಿಡದ ಎಲೆಗಳು ಭೂರ್ಜಪತ್ರ, ತಾಡಪತ್ರ, ಕಟ್ಟಿಗೆ.
(೮) ಕಾಗದ
(೯) ನಾಣ್ಯಗಳು

ಇವುಗಳಲ್ಲಿ ಕರ್ನಾಟಕದಲ್ಲಿ ಲಿಪಿಗಳು ಕಲ್ಲು, ಮಣ್ಣಿನ ಪಾತ್ರೆಗಳು, ಮತ್ತು ನಾಣ್ಯಗಳ ಮೇಲೆ ವಿಶೇಷವಾಗಿ ದೊರೆಯುತ್ತವೆ. ಗಿಡದ ಎಲೆಗಳು, ಕಾಗದಗಳ ಮೇಲಿನ ಬರೆಹವನ್ನು ಕುರಿತು ಇಲ್ಲಿ ಪ್ರಸ್ತಾಪಿಸುವದು ಅವಶ್ಯವಿಲ್ಲ.

ಕಲ್ಲುಗಳಲ್ಲಿ ಸ್ವಾಭಾವಿಕವಾದ ಗುಡ್ಡದ ಭಿತ್ತಿಗಳು, ಸ್ವಾಭಾವಿಕ ಗುಹೆಗಳು ಅಥವಾ ಕೃತ್ರಿಮ ಗವಿಗಳು, ಪ್ರತ್ಯೇಕವಾಗಿ ಕೊರೆದು ಮಾಡಿದ ಕಲ್ಲಿನ ವಸ್ತುಗಳು, ಕಂಬಗಳು, ಹಲಗೆಗಳು ಇತ್ಯಾದಿ ಬರುವವು. ಅಶೋಕ ಚಕ್ರವರ್ತಿಯ ಶಾಸನಗಳು ಸ್ವಾಭಾವಿಕವಾದ ಗುಡ್ಡದ ಭಿತ್ತಿಗಳ ಮೇಲೆ ಕೊರೆಯಲ್ಪಟ್ಟಿವೆ. ಬೌದ್ಧಧರ್ಮದ ನಿರ್ಬಂಧಗಳ ಮೇರೆಗೆ ಬೌದ್ಧ ಭಿಕ್ಷುಗಳು ಪ್ರಶಾಂತವಾದ ಬೆಟ್ಟಗಳ ತುದಿಯಲ್ಲಿ ಗುಹೆಗಳಲ್ಲಿ ವಾಸಿಸುತ್ತಿದ್ದರು. ರಾಜರು, ಮಾಂಡಲಿಕ ಅರಸರು, ಮತ್ತು ದಾನಶೂರರು ಧರ್ಮಿಷ್ಠ ಜನರು ಈ ಭಿಕ್ಷುಗಳ ಸಂಘಗಳಿಗೆ ಚೈತ್ಯಾಲಯಗಳಲ್ಲಿ ಪೂಜೆ ಪುನಸ್ಕಾರಕ್ಕೆ ಮತ್ತು ನಾಲ್ಕೂ ದಿಕ್ಕುಗಳಿಂದ ಬಂದ ಭಿಕ್ಷುಗಳ ಆಹಾರದಾನಕ್ಕೆ ದತ್ತಿಗಳನ್ನು ಬಿಡುತ್ತಿದ್ದರು. ಕಾರ್ಲೆ, ಕಾಣ್ಹೇರಿ, ಅಜಂತೆಗಳ ಗುಹೆಗಳಲ್ಲಿ ಇಂಥ ದಾನಶಾಸನಗಳು ಗೋಡೆಗಳ ಮೇಲೆ ಕೊರೆಯಲ್ಪಟ್ಟಿವೆ. ಕೊಪ್ಪಳ, ಮಾಸ್ಕಿ, ಸಿದ್ಧಾಪುರ, ಬ್ರಹ್ಮಗಿರಿ ಮತ್ತು ಜಟಿಂಗರಾಮೇಶ್ವರಗಳಲ್ಲಿ ಅಶೋಕನ ಶಾಸನಗಳು ಬಂಡೆಗಳ ಮೇಲೆ ಕೆತ್ತಲ್ಪಟ್ಟಿವೆ. ಉದ್ದವಾದ ಕಲ್ಗಂಬಗಳ ಮೇಲೂ ಅವನ ಲಿಪಿಗಳು ಸಿಕ್ಕುತ್ತವೆ. ವಡಗಾಂವಿಯ ಯೂಪಲಿಪಿಯು ಷಟ್ಕೋನಾಕಾರದ ದೊಡ್ಡ ಕಂಬದ ಮೇಲೆ ಬರೆಯಲ್ಪಟ್ಟಿದೆ.

ಮುಂದೆ ಸಾತವಾಹನ, ಕದಂಬ ಮತ್ತು ಚಲುಕ್ಯರ ಶಾಸನಗಳು ಸಾಮಾನ್ಯವಾಗಿ ಕಲ್ಗಂಬ, ಕಲ್ಲಿನಲ್ಲಿ ಕೆತ್ತಿ ಮಾಡಿದ ಸಪಾಟಾದ ಹಲಗೆಗಳು ಇವುಗಳ ಮೇಲೆ ಅಂದವಾಗಿ ಕೊರೆಯಲ್ಪಟ್ಟಿವೆ. (ಕದಂಬ ಕಾಕುಸ್ಥವರ್ಮನ ತಾಳಗುಂದದ ಸ್ತಂಭಶಾಸನ, ಐಹೊಳ್ಳಿ ದಿಗ್ವಿಜಯ ಪ್ರಶಸ್ತಿಯುಳ್ಳ ಶಿಲಾಫಲಕ, ದಂತಿದುರ್ಗ ವೇರೂಳಗವಿಯ ಶಾಸನಗಳು). ಮುಂದೆ ಕಾಲಕ್ರಮದಿಂದ ಈ ಕಲ್ಲಿನ ಹಲಗೆಗಳನ್ನು ನುಣುಪಾಗಿ ತಯಾರಿಸಿ ಮೇಲೆ ಪ್ರಸಂಗಕ್ಕೆ ತಕ್ಕ ಚಿತ್ರಗಳನ್ನು ಕೆತ್ತಿ ಕೆಳಗೆ ಮುದ್ದು ಮುದ್ದಾದ ಬಿಡಿ ಬಿಡಿ ಅಕ್ಷರಗಳನ್ನು ಕೆತ್ತಲಿಕ್ಕೆ ಆರಂಭವಾಯಿತು. ರಾಷ್ಟ್ರಕೂಟರ ಕಡೆಯ ಭಾಗ ಮತ್ತು ಕಲ್ಯಾಣದ ಚಾಲುಕ್ಯರ ಲಿಪಿಗಳು ಈ ಮಾದರಿಯ ವಿರುತ್ತವೆ. ಇವೇ ಕಾಲದ ಲಿಪಿಗಗಳಲ್ಲಿ ಕಲ್ಕುಟಿಗನು ಅಕ್ಷರಗಳಲ್ಲಿ ಅನೇಕ ಚಿತ್ರವಿಚಿತ್ರವಾದ ರೇಖಾಮಯ ವಿಗ್ರಹಗಳನ್ನು ಕೆತ್ತಿ ತನ್ನ ಕೌಶಲವನ್ನು ತೋರಿಸಿದ ಉದಾಹರಣೆಗಳುಂಟು. ಹೊಯ್ಸಳರ ಕಾಲದಲ್ಲಿ ಈ ಕಲಾ ಕೌಶಲವು ಪರಮಾವಧಿ

ಯನ್ನು ಮುಟ್ಟಿತು. ಮುಂದೆ ಕಲ್ಲುಗಳನ್ನು ಆರಿಸುವದರಲ್ಲಿಯೂ ಬರೆಯುವ ರೀತಿಯಲ್ಲಿಯೂ ಅಷ್ಟೊಂದು ಆಸ್ಥೆಯು ತೋರಿಬರುವದಿಲ್ಲ. ವಿಜಯನಗರದ ಶಾಸನಗಳು ಕಲ್ಲಿನ ಕಂಬಗಳ ಮೇಲೂ ದಪ್ಪ ದಪ್ಪಾದ ಹಾಸುಗಲ್ಲುಗಳ ಮೇಲೂ ಇರುವವು. ಈ ಕಲ್ಲಿನ ಶಾಸನಗಳ ಮೇಲೆ ಸಾಮಾನ್ಯವಾಗಿ ಶಿವ ಲಿಂಗ, ಬ್ರಹ್ಮ-ವಿಷ್ಣು-ಮಹೇಶ್ವರರ ಮೂರ್ತಿಗಳು, ಕರುವಿನೊಡನೆ ಆಕಳು, ರಿಂಟೆಯ ಚಿತ್ರ, ಖಡ್ಗ, ಸೂರ್ಯ-ಚಂದ್ರ ಮುಂತಾದ ಕೆತ್ತಿಗೆಗಳು ಕಂಡು ಬರುವವು.

ದೇವರಿಗೆ ಬ್ರಾಹ್ಮಣರಿಗೆ ಮತ್ತು ವಿದ್ವಾಂಸರಿಗೆ ಕೊಟ್ಟ ಶಿಲಾಫಲಕ ಶಾಸನಗಳಲ್ಲದೆ ವೀರಗಲ್ಲು, ಮಾಸ್ತಿಕಲ್ಲು, ನಿಷಿಧಿಕಲ್ಲುಗಳೂ ಸಾಮಾನ್ಯವಾಗಿ ಲಿಪಿಗಳುಳ್ಳವಿರುತ್ತವೆ. ವೀರಗಲ್ಲುಗಳ ಮೇಲೆ ಯುದ್ಧದ ಚಿತ್ರ, ನಿಸಿದಿ ಕಲ್ಲುಗಳ ಮೇಲೆ ಜೈನ ಗುಡ್ಡ-ಗುಡ್ಡಿಯರ ಮೂರ್ತಿಗಳು ಕಟೆಯಲ್ಪಟ್ಟಿರು ತ್ತವೆ. ಇವುಗಳಲ್ಲದೆ ವಿಶಿಷ್ಟ ಪ್ರಸಂಗಗಳಲ್ಲಿ ದೇವರು, ದೇಶ ಧರ್ಮಗಳ ಪಂಥಕ್ಕಾಗಿ ಕಠಾರಿಯಿಂದ ರುಂಡವನ್ನು ಕಡಿದು ಶಿವನಿಗೆ ಅರ್ಪಿಸಿದ ಅಥವಾ ಸೂರ್ಯಗ್ರಹಣಾದಿ ಪುಣ್ಯಕಾಲಗಳಲ್ಲಿ ಅಗ್ನಿಯಲ್ಲಿ ಹಾರಿ ಪ್ರಾಣಬಿಟ್ಟ ಉಪಾ ಸಕರ ಚಿತ್ರಗಳೂ ಕಂಡುಬರುತ್ತವೆ.

ಧಾತುಮಯ ಶಾಸನಗಳಲ್ಲಿ ಕರ್ನಾಟಕದಲ್ಲಿ ತಾಮ್ರಶಾಸನಗಳು ಪ್ರಚಾರದಲ್ಲಿರುವವು. ಇವುಗಳ ಆಕಾರ, ಜೋಡಣೆ, ಹೊಂದಿಸಿದ ಬಳೆಗಳು, ಮೋಹರುಗಳು ಕಾಲಮಾನಕ್ಕೆ, ರಾಜಮನೆತನಕ್ಕೆ ಮತ್ತು ಪ್ರಸಂಗಕ್ಕೆ-ನಿರೂ ಪಿತವಾದ ವಿಷಯಕ್ಕೆ ತಕ್ಕಂತೆ ಭಿನ್ನ ಭಿನ್ನವಾಗಿರುತ್ತವೆ. ತಾಡಾವಲಿಯ ಎಲೆಯ ಆಕಾರವನ್ನೂ ಅಳತೆಯನ್ನೂ ಅನುಸರಿಸಿ ಪ್ರಾಚೀನ ತಾಮ್ರ ಶಾಸನ ಗಳು— ಕದಂಬ-ಗಂಗ-ಚಲುಕ್ಯ-ರಾಷ್ಟ್ರಕೂಟರ ಶಾಸನಗಳು ತಯಾರಿಸಲ್ಪ ಟ್ಟಿರುತ್ತವೆ. ಎರಡರಿಂದ ಆರಂಭಮಾಡಿ ಹದಿನಾರು-ಹದಿನೇಳು ತಗಡುಗಳು ವರೆಗೆ ಒಂದು ತಾಮ್ರಶಾಸನದ ಗಾತ್ರವಿರುವದೆಂದು ಸಾಮಾನ್ಯವಾಗಿ ಹೇಳ ಬಹುದು. ಅವುಗಳ ಆಕಾರ, ಉದ್ದ-ಅಗಲಳತೆ, ಮೋಹರುಗಳು, ಮತ್ತು ಬರೆಹಗಳನ್ನು ನೋಡಿದೊಡನೆ ತಾಮ್ರಶಾಸನದ ಕಾಲ ಮತ್ತು ರಾಜಮನೆತನ ವನ್ನು ಊಹಿಸಬಹುದು.

ಸುಟ್ಟಮಣ್ಣಿನ ಪಾತ್ರೆಗಳ ಮೇಲೆ ಬರೆಹಗಳುಳ್ಳ ವಸ್ತುಗಳು ಕರ್ನಾಟಕದಲ್ಲಿ ಸಿಕ್ಕಿಲ್ಲ. ಹೈದರಾಬಾದದ ರಾಜಗೀರ ಉತ್ಖನನದಲ್ಲಿ ಹೊರಟ ಸಮಾಧಿ ಪಾತ್ರೆಗಳ ಮೇಲೆ ಕೆಲವು ರೇಖಾತ್ಮಕ ಲಿಪಿಗಳು ಸಿಕ್ಕಿವೆ.

ನಾಣ್ಯಗಳಲ್ಲಿ ಸೀಸ, ಬೆಳ್ಳಿ, ಬಂಗಾರ, ತಾಮ್ರ ಮತ್ತು ಹಿತ್ತಾಳಿಗಳು ಉಪಯೋಗಿಸಲ್ಪಟ್ಟಿವೆ ಸಾತವಾಹನರ ನಾಣ್ಯಗಳು ಸೀಸದಲ್ಲಿ ಇವೆ. ಪ್ರಾಚೀನ ಕದಂಬರ ಬಂಗಾರದ ಇಲ್ಲವೆ ಬೆಳ್ಳಿಯ ನಾಣ್ಯಗಳು ಸಿಕ್ಕಿಲ್ಲ. ಮುಂದೆ, ಬಂಗಾರ, ಬೆಳ್ಳಿ, ತಾಮ್ರಗಳು ನಾಣ್ಯಗಳಿಗಾಗಿ ವಿಪುಲವಾಗಿ ಉಪಯೋಗಿಸಲ್ಪಟ್ಟವು. ನಿಷ್ಕ, ಕಾರ್ಷಾಪಣ, ಗದ್ಯಾಣ, ಪಣ, ಪೊನ್, ವರಾಹಗಳು ಬಂಗಾರದ ನಾಣ್ಯಗಳು ಕಾಸು ತಾರ, ಜೀತಲ್‌ಗಳು ತಾಮ್ರದವು. ತಾರವು ಬೆಳ್ಳಿಯಲ್ಲಿಯೂ ಇರುತ್ತದೆ.

ಹೀಗೆ ಶಾಸನಗಳು ಕಲ್ಲು, ಮಣ್ಣು, ಧಾತುಗಳ ಮೇಲೆ ಕೆತ್ತಲ್ಪಟ್ಟಿದ್ದು ಅವು ೧೫೦೦–೧೦೦೦ ವರ್ಷಗಳಿಂದಲೂ ನಾಶ ಹೊಂದದೆ ಸಂಶೋಧಕರ ನೆರವಿಗೆ ಅಣಿಯಾಗಿ ಬಂದು ನಿಂತಿವೆ.

ಶಾಸನಗಳನ್ನು ಬರೆಯುವ ಕ್ರಮ

ಶಾಸನಗಳನ್ನು ರಾಜನ ಆಜ್ಞೆಯ ಮೇರೆಗೆ ಕಲ್ಲಿನ ಮೇಲಾಗಲಿ ಧಾತುಮಯ ವಸ್ತುಗಳ ಮೇಲಾಗಲಿ ಕೆತ್ತಲ್ಪಡುತ್ತಿದ್ದವು. ಅವು ರಾಜಾಜ್ಞೆಗಳೇ ಸರಿ. ಅವು ಸ್ಮಾರಕ ಇಲ್ಲವೆ ದತ್ತಿ ಶಾಸನಗಳಾಗಿದ್ದರೂ ಅವುಗಳನ್ನು ಬರೆಯುವ ಕ್ರಮವು ವಿಶಿಷ್ಟ ರೀತಿಯದಾಗಿತ್ತು. ದಾತೃ, ಪ್ರತಿಗೃಹೀತೃ ಅಥವಾ ದೇವತೆಗಳಿಗನುಗುಣವಾಗಿ ಲಿಪಿಗಳಲ್ಲಿ ಶೈವ, ವೈಷ್ಣವ, ಜೈನ ಎಂಬ ಮೂರು ಭೇದಗಳನ್ನು ಮಾಡಬಹುದು. ಈ ಮೂರು ತೆರದ ಲಿಪಿಗಳಲ್ಲಿಯೂ ಈ ಕೆಳಗಿನ ಕ್ರಮವು ಸಾಮಾನ್ಯವಾಗಿ ಅನುಸರಿಸಲ್ಪಡುತ್ತದೆ. (೧) ಮಂಗಳಶ್ಲೋಕ (೨) ಶಾಸನ ದಾತೃವಿನ ಅಂದರೆ ರಾಜ, ಮಾಂಡಲಿಕ, ದಾತೃ ಇವರ ವಂಶಾವಳಿ. (೩) ದಾನ ಮಾಡಿದ ಕಾಲ (೪) ಶಾಸನ ವಿಷಯ—ಅದರ ವಿವರಗಳು. (೫) ಉಪಸಂಹಾರ ಶ್ಲೋಕ-ಗದ್ಯಗಳು (೬) ಶಾಸನ ಕೊರೆದ ಕಲ್ಕುಟಿಗನ ಹೆಸರು (೭) ಸಾಕ್ಷಿ, (೮) ರಾಜನ ಒಪ್ಪಿಗೆಯ ಹಸ್ತಾಕ್ಷರ. ಇವುಗಳಲ್ಲಿ (೬) (೭) (೮) ಗಳು ಕೆಲವೆಡೆಗಳಲ್ಲಿ ಇರದೆ ಇರಬಹುದು. ಶೈವ

ರಾಜನ ಶಾಸನವಾಗಿದ್ದರೆ ಕಲ್ಲಿನ ಮೇಲ್ಬದಿಯಲ್ಲಿ ಅಂದವಾದ ಮಂಟಪದಲ್ಲಿ ಈಶ್ವರನ ಲಿಂಗವೂ ಅದರ ಬದಿಯಲ್ಲಿ ದಾನ ಮಾಡಿದವನು ಪೂಜೆ ಮಾಡುವ ಚಿತ್ರವೂ ಕೆತ್ತಲ್ಪಡುತ್ತವೆ. ಜೈನ ಶಾಸನದಲ್ಲಿ ಪಲ್ಯಂಕಾಸನದಲ್ಲಿದ್ದ ತೀರ್ಥಂಕರನ ಮೂರ್ತಿಯೂ ವೈಷ್ಣವ ಲಿಪಿಗಳಲ್ಲಿ ವಿಷ್ಣುವಿನ ಶಂಖ ಚಕ್ರಾದಿ ಆಯುಧಗಳೂ ಕೊರೆಯಲ್ಪಟ್ಟಿರುತ್ತವೆ. ಇದಲ್ಲದೆ ಈ ಎಲ್ಲ ಲಿಪಿಗಳಲ್ಲಿ ಆ ಆ ದೇವತೆಗೆ ಇಷ್ಟವಾದ ವಾಹನ—ನಂದಿ (ಶಿವನಿಗೆ) ಗರುಡ (ವಿಷ್ಣುವಿಗೆ) ಹಂಸ (ಬ್ರಹ್ಮನಿಗೆ) ಗಳೂ ಕರುವಿಗೆ ಮೊಲೆ ಕುಡಿಸುವ ಆಕಳ ಮೂರ್ತಿಯೂ ಆಯಾ ದತ್ತಿಗಳ ಸ್ವರೂಪವನ್ನು ತಿಳಿಸುತ್ತವೆ. ಶೈವಲಿಪಿಗಳ ಆದಿಯಲ್ಲಿ

ನಮಸ್ತುಂಗಶಿರಶ್ಚುಂಬಿ ಚಂದ್ರ ಚಾಮರಚಾರವೇ ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥

(ಬಾಣಕವಿಯ ಕಾದಂಬರಿಯಲ್ಲಿ ಈ ಶ್ಲೋಕವು ಮಂಗಳ ಪದ್ಯವಾಗಿದೆ.)

ವೈಷ್ಣವ ಶಾಸನಗಳಲ್ಲಿ

ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣ್ಣವಂ ।
ದಕ್ಷಿಣೋನ್ನತದಂಷ್ಟ್ರಾಗ್ರವಿಶ್ರಾಂತಭುವನಂ ವಪುಃ ॥

ಜೈನ ಲಿಪಿಗಳಲ್ಲಿ

ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ ।
ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥

ಎಂಬ ಶ್ಲೋಕಗಳು ಬರುತ್ತವೆ. ಉಪಸಂಹಾರ ಶ್ಲೋಕಗಳು ಬಹುಶಃ ಎಲ್ಲ ಶಾಸನಗಳಲ್ಲಿ ಒಂದೇ ಮಾದರಿಯವಾಗಿರುತ್ತವೆ. ಉದಾ—

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ !
ಷಷ್ಟಿರ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ
ದಾನಪಾಲನಯೋರ್ಮ್ಮಧ್ಯೇ ದಾನಾಚ್ಛ್ರೇಯೋನುಪಾಲನಂ ।
ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥
ನವಿಷಂ ವಿಷಮಿತ್ಯಾಹುಃ ದೇವಸ್ವಂ ವಿಷಮುಚ್ಯತೇ ।
ವಿಷಮೇಕಾಕಿನಂ ಹಂತಿ ದೇವಸ್ವಂ ಪುತ್ರಪೌತ್ರಕಂ ॥
ಏಕೈವ ಭಗಿನೀ ಲೋಕೇ ಸರ್ವೇಷಾಮೇವ ಭುಭುಜಾಂ ।

ನಭೋಜ್ಯಾ ನ ಕರಗ್ರಾಹ್ಯಾ ವಿಪ್ರದತ್ತಾ ವಸುಂಧರಾ ॥
ಸಾಮಾನ್ಯೋಯಂ ಧರ್ಮಸೇತು ರ್ನೃಪಾಣಾಂ ಕಾಲೇ ಕಾಲೇ
ಪಾಲನೀಯೋ ಭವದ್ಭಿಃ
ಸರ್ವಾನೇತಾನ್ಭಾವಿನಃ ಪಾರ್ಥಿವೇನ್ದ್ರಾನ್ ಭೂಯೋ ಭೂಯೋ
ಯಾಚತೇ ರಾಮಚಂದ್ರಃ ॥
ಬಹುಭಿರ್ವ್ವಸುಧಾ ಭುಕ್ತಾ ರಾಜಭಿಃ ಸಗರಾದಿಭಿಃ ।
ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾಫಲಂ ॥

• ಈ ಎಲ್ಲ ಶ್ಲೋಕಗಳಿಗೆ ಆ ಆ ಶಾಸನಗಳಲ್ಲಿ ಸಂತಿ ಚಾತ್ರ ವೇದ ವ್ಯಾಸೋಕ್ತಾಃ ಶ್ಲೋಕಾ: ಮನುಗೀತಾ ಶ್ಲೋಕಾ: ಇತ್ಯಾದಿ ಒಕ್ಕಣಿಕೆಗಳು ಬರುತ್ತವೆ.

ಶಾಸನವು ಸಂಸ್ಕೃತ ಅಥವಾ ಕನ್ನಡದಲ್ಲಿ ಇದ್ದರೂ ಅದರ ಕೊನೆಗೆ ಉಪಸಂಹಾರ ಶ್ಲೋಕಗಳಲ್ಲಿ ಕೆಲವಾದರೂ ಬರುವವು. ಕನ್ನಡ ಶಾಸನಗಳಲ್ಲಿ ಕೆಳಗಿನ ಮನೋಹರವಾದ ಉಪಸಂಹಾರ ಗದ್ಯವು ಕಂಡುಬರುತ್ತದೆ.

" ಈ ಧರ್ಮಮನಾವನೊರ್ವ್ವನ್ ಪ್ರತಿಪಾಳಿಸಿದಂ ಗಯೆಯೊಳ್ ಗಂಗೆಯೊಳ್ ಕುರುಕ್ಷೇತ್ರದೊಳ್ ವಾರಣಾಸಿಯೊಳ್ ಪ್ರಯಾಗೆಯೊಳ್ ಸಾಸಿರಕವಿಲೆಯಂ ಕೋಡುಂ ಕೊಳಗುಮಂ ಪಂಚರತ್ನಂಗಳಿಂ ಕಟ್ಟಿಸಿ ವೇದಪಾರಗರಪ್ಪ ಬ್ರಾಹ್ಮಣರ್ಗ್ಗೆ ಕೊಟ್ಟ ಪುಣ್ಯಮನೆಯ್ದುಗುಂ ॥ ಈ ಧರ್ಮ ಮನಾವನಾನುಂ ಕಳಿದವನಾ ಬ್ರಾಹ್ಮಣರುಮನಾ ಕವಿಲೆಗಳ್ಮನಾ ತೀರ್ಥದಲ್ಲಿ ಸ್ವಹಸ್ತದಿಂದಳಿದಂತಪ್ಪ ನರಕಕ್ಕೆವೋಹನ್........ "

ಕೆಲವು ಶಾಸನಗಳಲ್ಲಿ ಇದನ್ನು ಹೆಚ್ಚು ವಿಸ್ತರಿಸಿ ಬರೆದ ಉದಾಹರಣೆಗಳೂ ಉಂಟು.

ಶಾಸನದ ಕೊನೆಗೆ ಶಾಸನ ಕವಿ, ಲೇಖಕ, ಸಾಕ್ಷಿಗಳು ಸಾಮಾನ್ಯವಾಗಿ ಬರುತ್ತವೆ. ಶಾಸನವನ್ನು ರಚಿಸಿದವನು ಕವಿ. ಇವನು ಸಾಮಾನ್ಯವಾಗಿ ಸೇನಬೋವನೇ ಇರುತ್ತಿದ್ದನು. ಕೆಲವು ವಿಶಿಷ್ಟ ಸ್ಥಳಗಳಲ್ಲಿ ಪ್ರಸಿದ್ಧ ಕವಿಗಳು ರಚಿಸಿದ್ದಾರೆ. ರಾಜಸ್ಥಾನದಲ್ಲಿದ್ದ ಅಥವಾ ರಾಜನಿಂದ ಮಾನ್ಯವಾಗಿ ನೇಮಿಸಲ್ಪಟ್ಟ ಕವಿಯು ಶಾಸನವನ್ನು ರಚಿಸಿ ಅದನ್ನು ಕಲ್ಲ ಮೇಲಾಗಲಿ ಧಾತುಮಯ ವಸ್ತುಗಳ (ತಾಮ್ರಶಾಸನ ಇತ್ಯಾದಿ) ಮೇಲಾಗಲಿ ಮಸಿಯಿಂದ ಸುಂದರ

ವಾದ ಅಕ್ಷರಗಳಲ್ಲಿ 'ಲೇಖಕ' ನಿಂದ ಬರೆಸುತ್ತಿದ್ದರು. ಆಮೇಲೆ ಕಲ್ಕುಟಿಗನು ಅಥವಾ ಅಕ್ಕಸಾಲಿಗನು ಅದನ್ನು ಅಂದವಾಗಿ ಕೆತ್ತುತ್ತಿದ್ದನು. ಈ ಪದ್ಧತಿಯನ್ನು ಇಲ್ಲಿ ನೋಡಬಹುದು.

ಶಕ್ತಿವ್ಯುತ್ಪತ್ತಿಸಂಪನ್ನವಿದ್ವಚ್ಛ್ರೀಪಾದಸೇವಿನಾ ।
ರಚಿತಾಽಽದಿತ್ಯದೇವೇನ ಸೇಯಂ ಶಾಸನ ಪದ್ಧತಿಃ ॥
ಕೃತಿರಿಯಂ ತ್ರಿಭುವನವಿದ್ಯಾ ಚಕ್ರವರ್ತಿನಃ ಶ್ರೀಮದಾದಿ
ತ್ಯದೇವಸ್ಯ । ಲಿಖಿತಮಿದಂ ಪಂಡಿತ ಲಕ್ಷ್ಮೀಧರೇಣ ।
ಉತ್ಕೀರ್ಣಂಚ ರಾಜವಿಜ್ಞಾನಿನಾ ಪಂದಪೇನ ।

— ತಾಳಗುಂದ ಶಾಸನ

ರಾಜವಿಜ್ಞಾನಿಗಳ ಮನೆತನಗಳು ಪರಂಪರೆಯಿಂದ ಶಾಸನಗಳನ್ನು ಕೊರೆಯುವ ಹಕ್ಕನ್ನು ಪಡೆದಿದ್ದರೆಂಬುದನ್ನು ಗಂಗ ಮತ್ತು ಚಾಳುಕ್ಯರ ಲಿಪಿಗಳಿಂದ ಗೊತ್ತಾಗುವದು. ಕನ್ನಡ ಶಾಸನಗಳಲ್ಲಿಯೂ ಇದೇ ಮಾದರಿಯು ಮುಗಿತವು ಬರುವದು.

ತಾಮ್ರಶಾಸನಗಳನ್ನು ಬರೆಯುವ ಕ್ರಮವೂ ಇದೇ ರೀತಿಯಲ್ಲಿರುವದು. ಆದರೆ ಅಲ್ಲಿ ಪುಟಗಳ ಸಂಖ್ಯೆ ನಿಯಮಿತವಾಗಿರುವದರಿಂದ ಕವಿಯ ಹಾರಾಟಕ್ಕೆ ಅಷ್ಟೊಂದು ಅವಕಾಶವಿರುವದಿಲ್ಲ. ಈಗಿನ ಪುಸ್ತಕಗಳ ಪುಟಗಳಂತೆ ತಾಮ್ರ ಪತ್ರಿಕೆಗಳಿಗೆ ಎರಡೂ ಮಗ್ಗಲುಗಳಿಗೆ ಅಂಕಗಳನ್ನು ಹಾಕಿ ಅದರ ಗಾತ್ರವನ್ನು ನಿರ್ದಿಷ್ಟಪಡಿಸಿದ ಉದಾಹರಣೆಗಳಿರುತ್ತವೆ. ಈ ಎಲ್ಲ ಪತ್ರಿಕೆಗಳನ್ನು ಒಂದು ಉಂಗುರದಲ್ಲಿ ಪೋಣಿಸಿ ಅದಕ್ಕೆ ರಾಜಚಿಹ್ನವುಳ್ಳ—ಕೆಲವು ಕಡೆ ರಾಜನ ಹೆಸರೂ ಇರುವದು—ಮುದ್ರೆಯನ್ನು ಬೆಸಸಿ ಒಂದನ್ನು ಪ್ರತಿಗ್ರಹೀತನಿಗೂ ಇನ್ನೊಂದನ್ನು ರಾಜ ಕಾರ್ಯಾಲಯಕ್ಕೂ ಕೊಡುತ್ತಿದ್ದರು.

ವೀರಗಲ್ಲು-ಮಾಸ್ತಿಕಲ್ಲು ಇತ್ಯಾದಿ

ಇವುಗಳಲ್ಲಿ ಕೆಲವು ಲಿಪಿಗಳುಳ್ಳವೂ ಕೆಲವು ವೃತ್ತಸೂಚಕವಾದ ಕೇವಲ ಆಕೃತಿಗಳುಳ್ಳವೂ ಇರುತ್ತವೆ. ವೀರಗಲ್ಲುಗಳು ೩ ಅಥವಾ ೫ ಅಂತಸ್ತುಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಕೆಳಗಿನ ೨-೩ ಅಂತಸ್ತುಗಳಲ್ಲಿ ಗೋಗ್ರಹಣದ ಯುದ್ಧದ ದೃಶ್ಯವೂ ವೀರನ ಮರಣವೂ ಚಿತ್ರಿಸಲ್ಪಡುತ್ತವೆ. ಮೃತನಾದ ವೀರ

ನನ್ನು ಅಪ್ಸರಸ್ತ್ರೀಯರು ವಿಮಾನದಲ್ಲಿ ಸ್ವರ್ಗಕ್ಕೆ ಕರೆದೊಯ್ದಂತೆಯೂ ಅಲ್ಲಿ ಅವನು ಈಶ್ವರ ಲಿಂಗಪೂಜೆಯನ್ನು ಮಾಡುವಂತೆಯೂ ಚಿತ್ರಗಳು ಕೊರೆಯಲ್ಪಡುತ್ತವೆ. ಕಿಂನರ-ಕಿಂಪುರುಷ-ಗಂಧರ್ವ ಮೊದಲಾದವರು ನೃತ್ಯ ಗೀತ ವಾದ್ಯಗಳನ್ನು ಮಾಡುತ್ತಿರುವ ದೃಶ್ಯವೂ ತೋರಿಸಲ್ಪಡುತ್ತದೆ. ಮಾಸ್ತಿಕಲ್ಲು (ಮಹಾಸತಿಕಲ್ಲು) ಗಳ ಮೇಲೆ ಯುದ್ಧದಲ್ಲಿ ಮಡಿದ ಬಂಟನ ಹೆಂಡತಿಯ ಪೂರ್ಣ ವಿಗ್ರಹ ಅಥವಾ ಬಳೆಗಳುಳ್ಳ ಹಸ್ತದ (ಅಂದರೆ ಸುಮಂಗಲಿಯ) ಚಿತ್ರವು ತೋರುತ್ತದೆ. ವೀರ ಪುರುಷನ ಸಂಗ್ರಾಮವನ್ನು ವರ್ಣಿಸಿ ಪಲಬರಂ ಕೊಂದು ಸುರಲೋಕ ಪ್ರಾಪ್ತನಾದ ಎಂದು ಹೇಳಿ ಈ ಸಂಸ್ಕೃತ ಶ್ಲೋಕವನ್ನು ಕಡೆಗೆ ಕೊಡುವರು.

ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾ ।
ಕ್ಷಣೇನ ಧ್ವಂಧ್ವಂ ಕಾಮಯತಾಂ ಕಾ ಚಿಂತಾ ಮರಣೇ ರಣೇ ॥

'ಯುದ್ಧದಲ್ಲಿ ಗೆದ್ದರೆ ರಾಜ್ಯಲಕ್ಷ್ಮಿ ಬರುವಳು; ಮಡಿದರೆ ಸ್ವರ್ಗಲೋಕ ಲಭಿಸುವದು. ಒಂದೇ ಕ್ಷಣದಲ್ಲಿ ಇವೆರಡನ್ನೂ ಬಯಸುವವರಿಗೆ ಯುದ್ಧದಲ್ಲಿ ಯಾವ ಭಯವುಂಟು ?'

ಕೆಲವು ಸ್ಥಳಗಳಲ್ಲಿ 'ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ' ಎಂಬ ಪಾಠವು ತೋರುವುದು. ಆಗ ದೇಹವು ಒಂದುಕ್ಷಣದಲ್ಲಿ ನಾಶಹೊಂದುತ್ತಿರುವಾಗ ಯುದ್ಧದಲ್ಲಿ ಮಡಿಯುವದಕ್ಕೆ ಚಿಂತೆ ಏಕೆ ? ಎಂದು ಅರ್ಥವಾಗುವದು.

೫ ಶಾಸನಗಳಲ್ಲಿ ಕಾಲವನ್ನು ಕೊಡುವ ರೀತಿ

ಕ್ರಿ. ಶ. ೫ನೆಯ ಶತಮಾನಕ್ಕಿಂತ ಹಿಂದೆ ೧೨ ವರ್ಷದ ಬಾರ್ಹಸ್ಪತ್ಯ ಮಾನವು ರೂಢಿಯಲ್ಲಿದ್ದುದರಿಂದ ಕದಂಬ, ಶಾಲಂಕಾಯನ, ವಿಷ್ಣುಕುಂಡಿ ರಾಜರ ಹಳೆಯ ಲಿಪಿಗಳಲ್ಲಿ ಮಹಾವೈಶಾಖ, ಮಹಾಮಾಘ ಎಂದು ಚಾಂದ್ರ ಮಾನದ ತಿಂಗಳ ಹಿಂದೆ 'ಮಹಾ' ಎಂಬ ಪದವನ್ನು ಜೋಡಿಸಿ ಸಂವತ್ಸರ ಗಳ ಹೆಸರನ್ನು ನಿರ್ದೇಶಿಸುತ್ತಿದ್ದರು. ಮುಂದೆ ಚಾಲುಕ್ಯ ರಾಷ್ಟ್ರಕೂಟರ ಲಿಪಿ ಗಳಲ್ಲಿ ಸಾಮಾನ್ಯವಾಗಿ ಶಕವರ್ಷ, ರಾಜನ ಆಳಿಕೆಯ ವರ್ಷ, ಪ್ರಭವಾದಿ ಸಂವತ್ಸರದ ಹೆಸರು, ಅಯನ, ಮಾಸ, ತಿಥಿ, ನಕ್ಷತ್ರ, ಗ್ರಹಣ, ವ್ಯತೀಪಾತ, ಮಹಾಯೋಗ, ಅರ್ಧಯೋಗ ಇತ್ಯಾದಿ ಪುಣ್ಯಸಮಯದಲ್ಲಿ ದಾನಮಾಡಿದ ಉಲ್ಲೇಖಗಳು ಬರುತ್ತವೆ. ಈ ವಿವರಗಳಿಂದ ದಾನದ ಕಾಲವನ್ನು ನಿರ್ಧರಿಸ ಬಹುದು. ಹೊಯ್ಸಳ, ಯಾದವ, ವಿಜಯನಗರದ ರಾಜರ ಶಾಸನಗಳಲ್ಲಿಯೂ ಇದೇ ರೀತಿಯ ತಿಥಿ ನಿರ್ದೇಶವು ಕಾಲಕ್ಕೆ ತಕ್ಕಂತೆ ಹೆಚ್ಚು ಕಡಮೆ ಯಾಗಿ ಬರುತ್ತದೆ. ಇನ್ನು ಈ ವಿವರಗಳನ್ನು ಸರಿಯೋ ಅಲ್ಲವೋ ಎಂಬುದನ್ನು ಗಣಿತ ಮಾಡಿ ಒರೆಗೆ ಹಚ್ಚುವದು ಕಷ್ಟಸಾಧ್ಯ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಸಿದ್ಧಾಂತಗಳು (ಸೂರ್ಯ ಸಿದ್ಧಾಂತ, ಬ್ರಹ್ಮಸಿದ್ಧಾಂತ, ಆರ್ಯಸಿದ್ಧಾಂತ ಇತ್ಯಾದಿ) ಪ್ರಚಾರದಲ್ಲಿದ್ದುದರಿಂದ ಯಾವ ಗಣಿತವನ್ನು ಎಲ್ಲಿ ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿದುಕೊಳ್ಳುವದು ಸುಲಭ ವಲ್ಲ.

ಕೆಲವು ಶಾಸನಗಳಲ್ಲಿ ಶಕಗಳ ಅಂಕಗಳನ್ನು ಕಟಪಯಾದಿ ಪದ್ಧತಿ ಯಿಂದ ಅಥವಾ ಶಬ್ದಗಳ ಸಂಕೇತದಿಂದ ಹೇಳುವದುಂಟು. ಅಂಕಗಳಿಗೆ ಸಾಮಾನ್ಯವಾಗಿ ಕೆಳಗಿನ ಸಂಕೇತಗಳು ಉಪಯೋಗಿಸಲ್ಪಡುತ್ತವೆ.

೧ ಶಶಿ, ಸೋಮ, ಶಶಾಂಕ ಇತ್ಯಾದಿ ಚಂದ್ರನ ಹೆಸರುಗಳು, ಪರಬ್ರಹ್ಮ, ಐರಾವತ, ಧ್ರುವ, ಪ್ರಪಂಚ ಇತ್ಯಾದಿ.

೨ ಅಕ್ಷಿ (ಕಣ್ಣು), ಬಾಹು, ಕರ್ಣ, ನಾಸತ್ಯ, ಓಷ್ಠ, ಪಕ್ಷ ಇಂ.

೩ ಅಗ್ನಿ, ರಾಮ, ಪುರೀ, ಲೋಕ, ಗುಣ, ಸಂಧ್ಯಾ ಇಂ.

೪ ಅಬ್ಧಿ, ಸಾಗರ, ಉಪಾಯ, ಯಾಗ, ಆಶ್ರಮ, ವೇದ, ವ್ಯೂಹ, ವರ್ಣ, ಜಾತಿ ಇಂ.

೫ ಇಂದ್ರಿಯ, ಇಕ್ಷು, ಭೂತ, ಪ್ರಾಣ, ತನ್ಮಾತ್ರ, ಕನ್ಯಾ, ಪಾಂಡವ ಇಂ.

೬ ಶಾಸ್ತ್ರ, ರುಚಿ, ಋತು, ಅಂಗ, ರಸ ಇಂ.

೭ ಶೈಲ, ದ್ವೀಪ, ವಾಯು, ಮುನಿ, ವಾರ, ರಾಜ್ಯಾಂಗ, ಸ್ವರ, ವಿಭಕ್ತಿ ಇಂ.

೮ ಗಜ, ದಿಕ್ಪಾಲ, ಸಿದ್ಧಿ, ಯೋಗ, ವಸು, ಅನುಷ್ಟುಪ್ ಇಂ.

೯ ನವರತ್ನ, ನಿಧಿ, ಖಂಡ, ದ್ವಾರ, ಗ್ರಹ, ಧೇನು ಇಂ.

೦ ಆಕಾಶ, ಗಗನ, ಶೂನ್ಯ ಇಂ.

೧೦ ಹಸ್ತಾಂಗುಲಿ, ರಾವಣಮೌಲಿ, ದಿಕ್, ರೂಪಕ, ಲಕಾರ, ನಾಟ್ಯ ಇಂ.

೧೧ ಮಹಾದೇವ, ರುದ್ರ, ಕಾರಣ, ತ್ರಿಷ್ಟುಪ್ ಇಂ.

೧೨ ಅರ್ಕ, ಮಾಸ, ರಾಶಿ, ದಿವಾಕರ ಇಂ.

೧೩ ತಾಂಬೂಲಗುಣ, ವಿಶ್ವೇದೇವ, ಅತಿಜಗತೀ, ಇಂ.

೧೪ ವಿದ್ಯಾ, ಯಮ, ಮನು, ಭುವನ, ಶಾಕ್ವರೀ ಇಂ.

೧೫ ತಿಥಿ, ಸ್ತ್ರೀಕಲಾ, ಅತಿಶಾಕ್ವರೀ ಇಂ.

೧೬ ಇಂದುಕಲಾ, ಅಂಬಿಕಾ, ಇಂ.

೧೮ ದ್ವೀಪ, ಪರ್ವ

೨೦ ರಾವಣಭುಜ, ಅಂಗುಲ

೧೦೦ ಧಾರ್ತರಾಷ್ಟ್ರ. ಶಕ್ರಯಜ್ಞ, ರಾವಣಾಂಗುಲಿ

೧೦೦೦೦ ಜಾಹ್ನವೀವಕ್ತ್ರ, ವೇದಶಾಖಾ, ಶೇಷಶೀರ್ಷ ಇಂ.

ಇವಲ್ಲದೆ ಇನ್ನೂ ಬೇರೆ ಬೇರೆ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಈ ಸಂಕೇತಗಳ ಜ್ಞಾನವಿಲ್ಲದೆ ಕಾಲಮಾನವನ್ನು ತಿಳಕೊಳ್ಳುವದು ಸಾಧ್ಯವಿಲ್ಲ. 'ಅಂಕಾನಾಂ ವಾಮತೋ ಗತಿಃ' ಎಂಬಂತೆ ವಿಪರೀತವಾಗಿ ಆ ಸಂಕೇತಗಳನ್ನು ಬರೆದು ಕಾಲದ ಅಂಕವನ್ನು ಗೊತ್ತುಮಾಡಿಕೊಳ್ಳಬೇಕು.

ಕೆಳಗಿನ ಉದಾಹರಣೆಗಳಿಂದ ಈ ಮಾತು ಸ್ಪಷ್ಟವಾಗುತ್ತದೆ.

ಹಂಪಿಯ ಒಂದು ಶಾಸನದಲ್ಲಿ (South Indain Inscriptions Vol. iv, No. 267) ತಿಥಿನಿರ್ದೇಶದ ಪದ್ಯವು ಹೀಗೆ ಇದೆ:—

ತತ್ಸಮಯಕ್ಕೆ **ದೃಕ್ಪುರಶಿಖೀಂದುಶಶಾಂಕ** ವಿರಲ್ ವಿರೋಧಿಸಂ-
ವತ್ಸರ ಫಾಲ್ಗುನ ಪ್ರಥಮಮಾಸದೊಳ್ಗುರುವಾರ ಮೊಂದೆ ವಿ-
ದ್ವತ್ಸಭೆ ಬಣ್ಣಿಪಂತೆಸಗಿದಂ ಸಚಿವಾಗ್ರಣಿ ಲಕ್ಷ್ಮಣಂ ಸಮು-
ಸ್ತೋತ್ಸವಮುಣ್ಮೆ ಪೊಣ್ಮಿರೆ ಮಹಾಗಣನಾಥ ನವಪ್ರತಿಷ್ಠೆಯಂ ॥

ಇಲ್ಲಿ ದೃಕ್=೨, ಪುರ=೩, ಶಿಖಿ (ಅಗ್ನಿ)=೩, ಇಂದು=೧ 'ಅಂಕಾನಾಂ ವಾಮತೋ ಗತಿಃ' ಎಂಬಂತೆ ೧೩೩೨ ಆಗುತ್ತದೆ. ಇದು ವಿಜಯನಗರದ ದೇವರಾಯನ ಕಾಲದ ಶಕ ೧೩೩೨ರಲ್ಲಿ ಕೆತ್ತಲ್ಪಟ್ಟ ಶಾಸನ. ಅಚ್ಯುತರಾಯನ ಕಾಲದ 'ಆನಂದನಿಧಿ' ಶಾಸನದಲ್ಲಿ (Ibid, Nos. 256, 257, 268)

ಶಾಕೇ ಚಂದ್ರರಸಾಮರೇಂದ್ರಗಣಿತೇ ವರ್ಷೇ ವಿಕಾರ್ಯಾಹ್ವಯೇ ।
ಪಕ್ಷೇ ಭಾದ್ರಪದಸ್ಯ ಪೋಷಿತವಿಧೌ ದ್ವಾದಶ್ಯಭಿಖ್ಯಾತಿಥೌ ॥
ವಾರೇ ಭೂಮಿಸುತಸ್ಯ ವಿಷ್ಣ್ವಧಿಪತೌ ತಾರೇಽಚ್ಯುತಕ್ಷ್ಮಾಪತಿ= ।
ರ್ದತ್ವಾನಂದನಿಧಿಂ ದ್ವಿಜಾನ್ ಧನದಯನ್ಮಾಮೋದಯನ್ಮಾಧವಂ॥

ಇದರಂತೆ ಕೃಷ್ಣದೇವರಾಯನು ಕೃಷ್ಣಸ್ವಾಮಿ ಗುಡಿಯಲ್ಲಿ ಬಾಲಕೃಷ್ಣನ ಪ್ರತಿಷ್ಠೆಯನ್ನು ಮಾಡಿದ ತಿಥಿನಿರ್ದೇಶವನ್ನು ನೋಡಿರಿ:—

ಸೋಯಂ ಶ್ರೀವರ ಕೃಷ್ಣರಾಯ ನೃಪತಿ ರ್ಜಿತ್ವೋದಯಾದ್ರಿಂ ತತಃ
ಕೃಷ್ಣಂ
ದೇವಮುಪಾಯತಃ ಸ್ವನಗರೀಂ ನೀತ್ವಾ ಮಣೀಮಂಟಪೇ।
ಶಾಲೀಯಾಬ್ದರಸಾಗ್ನಿ ವೇದವಿಧು ಯುಗ್ಭಾವೇ ತಪಸ್ಯೇ ಸಿತೇ
ಕಾರ್ತಿಯ್ಯೇ ದಿವಸೇ ವ್ರಿಷೇಪಿ ವಿಧಿವತ್ಕೃಷ್ಣಪ್ರತಿಷ್ಠಾಂ ವ್ಯಧಾತ್॥

=ಶಾಲೀಯ=ಶಾಲಿವಾಹನ ಶಕದ ಅಬ್ದ ವರ್ಷ, ರಸ=೬ ಅಗ್ನಿ=೩, ವೇದ=೪, ವಿಧು=೧ ಶಕ ೧೪೩೬ ಎಂದು ಆಗುತ್ತದೆ.

ಇನ್ನು ಉಳಿದ ಕಡೆ ತಿಥಿನಿರ್ದೇಶದ ಕ್ರಮವು ಕಾಲಕ್ರಮಕ್ಕೆ ತಕ್ಕಂತೆ ಹೇಗೆ ಬದಲಾಗುತ್ತ ಹೋಗುತ್ತದೆ ಎಂಬುದನ್ನು ಕೆಳಗಿನ ಉದಾಹರಣೆಗಳಿಂದ ದಿಗ್ದರ್ಶನ ಮಾಡುತ್ತೇವೆ.

ಚಲುಕ್ಯ:—

ತ್ರಿಂಶಸ್ತು ತ್ರಿಸಹಸ್ರೇಷು ಭಾರತಾದಾಹವಾದಿತಃ ।
ಸಪ್ತಾಬ್ದ ಶತಯುಕ್ತೇಷು ಶತೇಷ್ವಬ್ದೇಷು ಪಂಚಸು ॥
ಪಂಚಾಶತ್ಸು ಕಲೌ ಕಾಲೇ ಷಟ್ಸು ಪಂಚ ಶತಾಸುಚ ।
ಸಮಾಸು ಸಮತೀತಾಸು ಶಕಾನಾಮಪಿ ಭೂಭುಜಾಂ ॥

(೨ನೆಯ ಪುಲಕೇಶಿಯ ಐಹೊಳ್ಳಿಯ ದಿಗ್ವಿಜಯ ಪ್ರಶಸ್ತಿ ಶಾಸನ)

=ಶಕ ೫೫೬, ಭಾರತ ಯುದ್ಧದಿಂದ ೩೭೩೫ ವರ್ಷಗಳು ಸಂದಿಸಿದ ಕಲಿಕಾಲದಲ್ಲಿ ಅಂದರೆ ಕಲಿಯುಗ ೩೭೩೫ನೆಯ ವರ್ಷ=ಕ್ರಿ. ಶ. ೬೩೪.

ವಿನಯಾದಿತ್ಯನ ಸೊರಬ ತಾಮ್ರಶಾಸನ:—

ಚತುರ್ದಶೋತ್ತರ ಷಟ್ಛತೇಷು ಶಕವರ್ಷೇ ಷ್ವತೀತೇಷು ಪ್ರವರ್ಧಮಾನ ವಿಜಯರಾಜ್ಯ ಸಂವತ್ಸರೇ ಏಕಾದಶೇ ವರ್ತಮಾನೇ....ದಕ್ಷಿಣಾಯನಾಭಿಮುಖೇ ಭಗವತಿ ಭಾಸ್ಕರೇ ರೋಹಿಣೀ ನಕ್ಷತ್ರೇ ಶನೈಶ್ಚರ ವಾರೇ =ಕ್ರಿ. ಶ. ೬೯೨, ಜೂನ ೨೨, ಶನಿವಾರ.

ರಾಷ್ಟ್ರಕೂಟ:—

ಸ್ವಸ್ತ್ಯಮೋಘವರ್ಷ ಶ್ರೀ ಪೃಥಿವೀವಲ್ಲಭ ಮಹಾರಾಜ ರಾಜಪರಮೇಶ್ವರ ಭಟರರ ರಾಜ್ಯಾಭಿವೃದ್ಧಿಯೊಳ್ಶಕ ನೃಪಕಾಲಾತೀತ ಸಂವತ್ಸರಶತಂಗಳೆಣ್ಟೂಱೆಣ್ಭತ್ತೇೞನೆಯ ಪಾರ್ಥಿವ ಸಂವತ್ಸರಂ ಪ್ರವರ್ತ್ತಿಸೆ ಪುರಿಗೆಱೆನಾಡ ಕುಪ್ಪೆಯನಾಳೆ ವೈಶಾಖ ಮಾಸದ ಪೌರ್ಣ್ನಮಾಸೆಯನ್ದೆಣ್ಪುಣಾಸೆಯ....

=ಕ್ರಿ. ಶ. ೮೬೫, ಎಪ್ರಿಲ್ ೧೪, ಶನಿವಾರ (ಸಿಗ್ಗಾವಿ ಶಾಸನ. K. I. Vol. I. No· 137)

ಕಲ್ಯಾಣಿಯ ಚಾಳುಕ್ಯರು:—

ಸಕವರ್ಷ ೯೭೭ ನೆಯ ಮನ್ಮಥ ಸಂವತ್ಸರದ ಪೌಷ್ಯಸುದ್ಧ ೧೩ ಸೋಮವಾರಮುಂ ಉತ್ತರಾಯಣ ಸಂಕ್ರಾನ್ತಿಯುಂ ವ್ಯತೀಪಾತದನ್ದು (Ibid No· 17)

ಈ ತಿಥಿನಿರ್ದೇಶವು ಯಾವ ಪಂಚಾಂಗದ ಲೆಕ್ಕಕ್ಕೂ ಸರಿ ಹೋಗುವದಿಲ್ಲ.

ಕಳಚುರ್ಯರು:—

ಶ್ರೀಮಚ್ಛಕವರ್ಷಂ ೧೧೦೮ನೆಯ ಚಿತ್ರಭಾನು ಸಂವತ್ಸರದ ಪುಷ್ಯ ಬಹುಳ ೨ ಸೋಮವಾರದಂದುತ್ತರಾಯಣ ಸಂಕ್ರಾ (ನ್ತಿ) ಯುಲು ವ್ಯತೀಪಾತಂ ಕೂಡಿದ ದಿವ್ಯತಿಥಿಯಲು (Ibid, No. 27)

=ಕ್ರಿ. ಶ. ೧೧೬೨, ದಿಶೆಂಬರ ೨೪, ಸೋಮವಾರ.

ಇಲ್ಲಿಂದ ಮುಂದೆ ತಿಥಿ ನಿರ್ದೇಶಕದ ಕ್ರಮವು ಇದೇ ರೀತಿಯಾಗಿ ಬರುತ್ತದೆ.

ಈ ಎಲ್ಲ ತಿಥಿ ನಿರ್ದೇಶ ಕ್ರಮವನ್ನು ನೋಡಿದರೆ, ರಾಜರಾಗಲಿ, ಶ್ರೀಮಂತರಾಗಲಿ ದಾನಗಳನ್ನು ವೇದಪಾರಗರಪ್ಪ ಬ್ರಾಹ್ಮಣರಿಗೂ ದೇವಸ್ಥಾನಗಳಿಗೂ ವಿಶಿಷ್ಟ ಪುಣ್ಯ ಸಮಯಗಳಲ್ಲಿ ಮಾಡುತ್ತಿದ್ದರೆಂದೂ ಆ ಸಮಯಪರಿಪಾಲನೆಯಿಂದ ದಾನದ ಫಲವಲ್ಲದೆ ಹೆಚ್ಚಿನ ಯೋಗಫಲವೂ ಲಭಿಸುವದೆಂದು ದೃಢವಾಗಿ ನಂಬಿದ್ದರೆಂದೂ ತಿಳಿಯಬಹುದು. ಈ ನಂಬಿಕೆಯು ಕರ್ನಾಟಕದಲ್ಲಷ್ಟೇ ಅಲ್ಲ. ಇಡಿಯ ಭಾರತ ಭೂಮಿಯಲ್ಲಿ ಜನರ ಹೃದಯದಲ್ಲಿ ನಟ್ಟಿತ್ತೆಂದೂ ಆ ಆ ಪ್ರಾಂತಗಳ ಶಾಸನ್ಕಗಳ ಪರಿಶೀಲನೆಯಿಂದ ಗೊತ್ತಾಗುವದು. ಈ ಧಾರ್ಮಿಕ ನಂಬಿಕೆಯು ಆಳವಾದ ತತ್ವಜ್ಞಾನದ ತಳಹದಿಯಮೇಲೆ ನಿಂತಿದ್ದರಿಂದ ಇದಕ್ಕೆ ಈ ಪುಣ ಭೂಮಿಯಲ್ಲಿ ಸರ್ವಥಾ ಚ್ಯುತಿ ಇಲ್ಲ. ಆದ್ದರಿಂದಲೇ ಭಾರತವು ಒಂದೇ ಒಂದಾದ ಆರ್ಯ ಸಂಸ್ಕೃತಿ ಅಥವಾ ಶಿಷ್ಟ ಸಂಪ್ರದಾಯದ ಪ್ರಭಾವಕೆ ಒಳಗಾಗಿದೆ.

೬ ಇತರ ವೈಶಿಷ್ಟ್ಯಗಳು

ಈ ಚಿಕ್ಕ ಹೊತ್ತಿಗೆಯಲ್ಲಿ ಕರ್ನಾಟಕದ ಶಾಸನಗಳ ಸ್ವರೂಪವನ್ನು ಸಾಮಾನ್ಯವಾಗಿ ತಿಳಿಸಿಕೊಟ್ಟಿದ್ದೇವೆ. ಅಲ್ಲಿ ತೋರಿಬರುವ ಇನ್ನಿತರ ಕೆಲವು ವೈಶಿಷ್ಟ್ಯಗಳನ್ನು ಸಂಕೇಪವಾಗಿ ವಿವರಿಸುತ್ತೇವೆ:—

೧ ದತ್ತಿ ಗ್ರಾಮಗಳನ್ನು ಹೇಳುವಾಗ ಆ ಗ್ರಾಮಗಳ ಭೌಗೋಲಿಕ ವಿವರಣೆಯು ವಿಶಿಷ್ಟ ರೀತಿಯಿಂದ ಕೊಡಲ್ಪಡುತ್ತದೆ. ಉದಾ:—ಪಾನುಂಗಲ್ಲಯ್ನೂಱಱ ಕಮ್ಪಣಂ ನಿಡುಗುನ್ದಗೆ ಪನ್ನೆರಡಱ ಬಳಿಯ ಪಳ್ಳವುರಂ ತಳವೃತ್ತಿಯಾಗೆ.... " (Karnatak Inscriptions Vol. I. No. 17, p. 23) ಕೆಲವೆಡೆಗಳಲ್ಲಿ ಜಂಬೂದ್ವೀಪ, ಭರತಕ್ಷೇತ್ರ, ಕುಂತಳ, ಆ ಕುಂತಳ ವಿಷಯದಲ್ಲಿ ಪ್ರಕೃತೋಪಯುಕ್ತವಾದ ವಿಷಯ, ನಾಡು, ಮಹಾಗ್ರಾಮ, ಗ್ರಾಮ, ಇತ್ಯಾದಿ ವಿವರಗಳು ಬಹು ಸೂಕ್ಷ್ಮವಾಗಿ ಬರುತ್ತವೆ. ಈ ಕ್ರಮವನ್ನು ನೋಡಿದರೂ ಕರ್ನಾಟಕವು ಭಾರತ ಅದೇಕೆ ಜಂಬೂದ್ವೀಪದ ಭಾಗವೆಂಬ ಭಾವನೆಯು ಅನಾದಿ ಕಾಲದಿಂದ ಜನರಲ್ಲಿ ಗಟ್ಟಿಯಾಗಿ ನಟ್ಟಿತ್ತೆಂದು ಗೊತ್ತಾಗುತ್ತದೆ. ಆದರೆ ಇಲ್ಲಿ ವಿಶಿಷ್ಟ ರೀತಿಯಿಂದ ನಾಡುಗಳನ್ನೂ ಊರುಗಳನ್ನೂ ಹೇಳುವ ಕ್ರಮವನ್ನು ನಾವು ಲಕ್ಷದಲ್ಲಿಡಬೇಕು. ಈಗ ಹಾನುಂಗಲ್ಲು ೫೦೦ರ ಕಂಪಣ (ತಾಲೂಕು) ನಿಡಗುನ್ದಗೆ-೧೨, ಈ ಅಂಕಗಳ ಅರ್ಥವೇನೆಂಬುದನ್ನು ತಿಳಕೊಳ್ಳುವಾ. ಕೆಲವರು ಆ ಅಂಕವು ಆ ಆ ಭಾಗದ ಜನಸಂಖ್ಯೆಯನ್ನು ಅಥವಾ ಕಂದಾಯವನ್ನು ಸೂಚಿಸುತ್ತದೆಂದು ಹೇಳುತ್ತಾರೆ. ಇದು ಅಂಕದ ಲೆಕ್ಕ ಹಾಕಿ ನೋಡಿದರೆ ಸರಿಯಾಗುವದಿಲ್ಲ. ನಿಡುಗುನ್ದಗೆ—೧೨ ಅಂದರೆ ಅಲ್ಲಿಯ ಕಂದಾಯವು ೧೨ ನಾಣ್ಯಗಳಾಗಲಿ ಧಾನ್ಯದ ಅಳತೆಯಾಗಲಿ ಇತ್ತೆಂದು ತಿಳಿಯುವುದು ಸಮಂಜಸವಾಗುವದಿಲ್ಲ. ಈ ತೊಡಕನ್ನು ಒಂದು ಶಾಸನವು ಸ್ಪಷ್ಟವಾಗಿ ಬಿಡಿಸಿ ಎಲ್ಲ ಸಂದೇಹವನ್ನು ದೂರಮಾಡಿದೆ. ರಾಷ್ಟ್ರಕೂಟ ೩ನೆಯ ಕೃಷ್ಣನ ಬಂಡಳಿಕೆ ಶಾಸನದಲ್ಲಿ ಬಂಕೆಯರಸನ ಮಗನಾದ ಲೋಕಟೆಯರಸನು ಬನವಾಸಿ—೧೨೦೦೦, ಪಲಸಿಗೆ—೧೨೦೦೦,

ಮಾನ್ಯಖೇಟ—೬೦೦೦, ಕೊಳಸು—೩೦, ಲೋಕಾಪುರ—೧೨, ತೊಱಗಱೆ ೬೦ ಅಂತು, ೩೧, ೧೦೨ ಬಾಡಂಗಳನ್ನು ಆಳುತ್ತಿದ್ದನೆಂದು ಬರೆದಿದೆ. ಇದರಿಂದ ಅಂಕಗಳು ಆ ಆ ನಾಡು, ವಿಷಯ, ಮಹಾಗ್ರಾಮ ಇತ್ಯಾದಿ ವಿಭಾಗಗಳಿಗೆ ಒಳಪಟ್ಟ ಚಿಕ್ಕಹಳ್ಳಿ (ಬಾಡ) ಗಳ ಸಂಖ್ಯೆಯೆಂದು ತಿಳಿಯ ಬರುತ್ತದೆ. ಈ ಭೌಗೋಲಿಕ ವಿವರಣ ಪದ್ಧತಿಯು ವಿಜಯನಗರದ ಕಾಲದವರೆಗೂ ಇತ್ತು. ನಡುವೆ ಆ ಆ ವಿಭಾಗಗಳಿಗೆ ರಾಜರ ಹೆಸರನ್ನು ಸೇರಿಸುವ ಹೊಸ ರೂಢಿಯು ತಮಿಳು ದೇಶದ ಸಂಸರ್ಗದಿಂದ ಉಂಟಾದಂತೆ ತೋರುತ್ತದೆ.

ಈ ಅಂಕಗಳಿಂದ ಗ್ರಾಮಗಳನ್ನು ಸೂಚಿಸುವ ಪದ್ಧತಿಯು ವೈದಿಕವಾಗಿತ್ತೆಂದು ಧರ್ಮಶಾಸ್ತ್ರಗಳಿಂದ ಗೊತ್ತಾಗುತ್ತದೆ. ಮನುಸ್ಮೃತಿ (೭,೧೧೫)ಯಲ್ಲಿ ರಾಜನು

> ಗ್ರಾಮಸ್ಯಾಧಿಪತಿಂ ಕುರ್ಯಾದ್ದಶಗ್ರಾಮಪತಿಂ ತಥಾ ।
> ವಿಂಶತೀಶಂ ಶತೇಶಂ ಚ ಸಹಸ್ರಪತಿಮೇವ ಚ ॥

ಗ್ರಾಮ, ದಶಗ್ರಾಮ, ವಿಂಶತಿ (೨೦) ಗ್ರಾಮ, ಶತ (೧೦೦) ಗ್ರಾಮ, ಸಹಸ್ರ (೧೦೦೦) ಗ್ರಾಮಗಳಿಗೆ ಅಧಿಪತಿಗಳನ್ನು ನೇಮಿಸಿ ಅಲ್ಲಿಯ ಆಡಳಿತವನ್ನು ನಡೆಸಬೇಕೆಂದು ಬರೆದಿದೆ. ಈ ವಿಭಾಗ ಪದ್ಧತಿಯು ಕರ್ನಾಟಕದಲ್ಲಿ ಅನೂಚಾನವಾಗಿ ಬಂದಂತೆ ಉಳಿದ ಕಡೆ ಬಂದಿಲ್ಲವೆಂದು ಶಾಸನಗಳಿಂದ ಗೊತ್ತಾಗುತ್ತದೆ.

೨ ಕರ್ನಾಟಕದ ರಾಜ್ಯಪದ್ಧತಿಯು ಹೊಸ ತಳಹದಿಯ ಮೇಲೆ ಕಟ್ಟಲ್ಪಟ್ಟಂತೆ ತೋರುತ್ತದೆ. ಆದರೆ ಅದರ ಮೂಲವನ್ನು ಇತರ ಭಾಗಗಳಲ್ಲಿ ಇದ್ದಂತೆ ವೈದಿಕ ಅಥವಾ ಧರ್ಮಶಾಸ್ತ್ರಗಳ ಪ್ರಮಾಣಗಳಲ್ಲಿ ಕಾಣಬಹುದು. ರಾಜನು ಪ್ರಧಾನ, ಮಹಾಪ್ರಧಾನ, ಕರಣ, ಮಂತ್ರಿ ಮುಂತಾದ ಅಧಿಕಾರಿಗಳ ಸಹಾಯದಿಂದಲೂ ರಾಜಗುರುಗಳು, ಧರ್ಮಶಾಸ್ತ್ರ ಪ್ರವೀಣರು ವೇದ ವಿದ್ಯಾನಿರತರು ಇವರ ಸಲಹೆಯಿಂದಲೂ ರಾಜ್ಯಭಾರ ಮಾಡುತ್ತಿದ್ದನು. ತನ್ನ ರಾಜ್ಯದಲ್ಲಿ ಆಡಳಿತೆಯ ಸೌಕರ್ಯಕ್ಕಾಗಿ ವಿಷಯ, ನಾಡು ಮುಂತಾದ ವಿಭಾಗಗಳನ್ನು ಮಾಡಿ ಅವುಗಳ ಮೇಲೆ ತನ್ನ ಆಪ್ತ ಪರಮ ವಿಶ್ವಾಸಿ ಜನರನ್ನು ಮಹಾಮಂಡಳೇಶ್ವರ ಅಥವಾ ಮಂಡಳೇಶ್ವರರನ್ನಾಗಿ ನೇಮಿಸುತ್ತಿದ್ದನು. ಪರಂಪರಾಗತ ರಾಜ್ಯಗಳನ್ನು ಅಲ್ಲಲ್ಲಿಯ ರಾಜರ ವಶಕ್ಕೆ ಬಿಟ್ಟು ಅವುಗಳ

ಮೇಲ್ವಿಚಾರಣೆಯನ್ನು ಮಾಡುತ್ತ ಕಪ್ಪವನ್ನು ಸ್ವೀಕರಿಸುತ್ತಿದ್ದನು. ಇನ್ನು ಈ ಎಲ್ಲ ಆಡಳಿತಕ್ಕೆ ಗ್ರಾಮಪದ್ಧತಿಯು ಬಲು ಬಿಗುವಾದ ತಳಹದಿಯಾಗಿತ್ತು. ಪ್ರತಿಯೊಂದು ಗ್ರಾಮವು ಸ್ವಾಯತ್ತ ಅಧಿಕಾರವನ್ನು ಅನುಭೋಗಿಸುತ್ತಿತ್ತು. ಈ ಅಧಿಕಾರವು ಧರ್ಮಶಾಸ್ತ್ರಗಳ ನಿಯಮಗಳ ಕಟ್ಟುನಿಟ್ಟಾದ ಪರಿಪಾಲನೆಯಲ್ಲಿ ಇತ್ತೆಂದು ಕಂಡುಬರುತ್ತದೆ. ರಾಜನು ದುಷ್ಟನಿಗ್ರಹ ಶಿಷ್ಟಪ್ರತಿಪಾಲನೆಯಿಂದ ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ಎಂದು ಸಾಮಾನ್ಯವಾಗಿ ಕರ್ನಾಟಕದ ಶಾಸನಗಳಲ್ಲಿ ವರ್ಣಿಸಲ್ಪಡುತ್ತಾನೆ. ಇಲ್ಲಿ 'ದುಷ್ಟ' ಮತ್ತು 'ಶಿಷ್ಟ' ರಾರೆಂಬುದನ್ನು ಪರೀಕ್ಷಿಸಿದರೆ ವೈದಿಕ ಧರ್ಮಕ್ಕೆ ಅನುಕೂಲರಾಗಿ ದೇವತೆ ಧರ್ಮಗಳ ರಕ್ಷಣೆಯನ್ನು ಮಾಡುವವರು ಶಿಷ್ಟರೆಂದೂ ಅದಕ್ಕೆ ವಿರೋಧ ಮಾಡುವವರು ದುಷ್ಟರೆಂದೂ ಗೊತ್ತಾಗುತ್ತದೆ. ಶಾಸನಗಳ ಉಪಸಂಹಾರ ಶ್ಲೋಕಗಳಿಂದಲೂ ಗದ್ಯಗಳಿಂದಲೂ ಈ ಮಾತು ಸ್ಪಷ್ಟವಾಗುತ್ತದೆ.

ಅಗ್ರಹಾರ, ಬ್ರಹ್ಮಪುರಿ ಮುಂತಾದ ಗ್ರಾಮಗಳ ಆಡಳಿತವು ಮಹಾಜನರ ಕೈಯಲ್ಲಿ ಇತ್ತು. ಆಯಾಯ ಗ್ರಾಮಗಳ ಮಹಾಜನರ ಸಂಖ್ಯೆಯು ಅವುಗಳ ಯೋಗ್ಯತೆಗೆ ತಕ್ಕಂತೆ ಬೇರೆಬೇರೆಯಾಗಿತ್ತು. ಲಕ್ಕುಂಡಿ, ಹೂಲಿ, ಮುಂತಾದ ದೊಡ್ಡ ಅಗ್ರಹಾರಗಳು ಸಹಸ್ರ ಬ್ರಾಹ್ಮಣರ ಆಡಳಿತಕ್ಕೆ ಒಳಪಟ್ಟಿದ್ದವು. ಅಗ್ರಹಾರ ಚೂಡಾಮಣಿಯಾದ ಹೂಲಿಯ ಸಾಸಿರ್ವರ್ಮಹಾಜನಂಗಳ ವರ್ಣನೆಯು ಉದ್ಬೋಧಕವಾಗಿದೆ:—

> ಶ್ರೀರಾಮಾಯಣ ಭಾರತಾದಿ ಮನುಚಾರಿತ್ರಂಗಳ ವ್ಯಾಪ್ತಿಯೊಳ್ ।
> ಸಾರಾಸಾರವಿಚಾರತರ್ಕನಿಚಯಪ್ರಖ್ಯಾತ ಶಾಸ್ತ್ರಂಗಳೊಳ್ ॥
> ಶೂರವ್ವೇದಸಮೂಹದೊಳ್ಸಕಳ ತತ್ವಜ್ಞಾನ ಸಂಪತ್ತಿಯಿಂ.
> ದಾರಾಧ್ಯರ್ಧರೆಗೆಂದಡೇಂ ಪಿರಿಯರಾಸಾಸಿರ್ವ್ವರಿನ್ದುರ್ವ್ವಿಯೊಳ್॥

K. I. Vol. I. No.,

ಇದರಂತೆ ಲಕ್ಕುಂಡಿಯ **ಮಹಾಜನಂಗಳ** ವರ್ಣನೆಯಿಂದ ಗ್ರಾಮದ ಆಡಳಿತವು ಎಷ್ಟು ಉದಾತ್ತವಾಗಿತ್ತೆಂಬುದು ಗೊತ್ತಾಗುತ್ತದೆ:— ದಾನಚಿಂತಾಮಣಿ ಅತ್ತಿಮಬ್ಬೆಯು ಲೊಕ್ಕಿಗುಂಡಿಯಲ್ಲಿ ಬ್ರಹ್ಮಜಿನೇಂದ್ರಗೇಹವನ್ನು ನಿರ್ಮಿಸಿ ಅಲ್ಲಿಯ ಮಹಾಜನಂಗಳ ಅಪ್ಪಣೆಯಿಂದ ಬಸದಿಗೆ ತೋಂಟವನ್ನು

ದಾನ ಮಾಡಿದಳೆಂದು ಹೇಳುವ ಸಂದರ್ಭದಲ್ಲಿ ಬರುವ ಮಹಾಜನರ ವರ್ಣನೆಯು ಗಮನಾರ್ಹವಾಗಿದೆ:—

'ಸ್ವಸ್ತಿಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾನ ಪರಾಯಣ ಜಪಸಮಾಧಿಶೀಳಸಮ್ಪನ್ನರ್ಸ್ಸಮಸ್ತ ಗುಣಗಣಾಳಂಕೃತರ್ವ್ವಿದಿತ ವೇದಾರ್ಥವಿದ್ಯಾಪಾರಗರ್ಷಟ್ಕರ್ಮ್ಮ ನಿರತರ್ಸ್ಸಪ್ತ ಸೋಮಸಂಸ್ಥಾವಭೃಥಾವಗಾಹನ ಪವಿತ್ರೀ ಕೃತಶರೀರ ರಷ್ಟಾದಶ ಧರ್ಮ್ಮಶಾಸ್ತ್ರ ಕುಶಳರೇಕವಾಕ್ಯ ರಚಳಿತ ಧೈರ್ಯರ್ಸ್ಸಿಂಹ ಪರಾಕ್ರಮರಾಶ್ರಿತ ಜನಕಳ್ಪವೃಕ್ಷ ರಹಿತ ಪಕ್ಷಿಕ್ಷಯಕರ ರ್ಕಲಿಯುಗ ಗಾಂಗೇಯರ್ಪ್ಪರಮಪರೋಪಕಾರಿಗಳ್ಪ್ಯಾಪಾನುಗ್ರಹಸಮರ್ತ್ಥರ್ಕ್ಕಾರ್ಯರ್ ಬ್ರಹಸ್ಪತಿಗಳೇ ಕೈಕಪಂಡಿತರ್ವ್ವೈಷ್ಣವಗೀತಿಮನೋಹರರ್ಪ್ಪಾಪಭೀರುಗಳ್ಪರನಾರೀ ದೂರದುರ್ದ್ದಷ್ಟ ವಿಧ್ವಂಸಕರ್ಶ್ಶಿಷ್ಟ ಜನಾಶ್ರಯರ್ಕ್ಕಾಮ ಕ್ರೋಧ ಲೋಭ ಮೋಹ ಭಯ ವಿವರ್ಜ್ಜಿತರ್ದ್ದ್ವಾತ್ರಿಂಶ ಸಹಸ್ರ ಸಮಯಾಗ್ರಾರ್ಹರ್ದ್ವಿಜಕುಳ ತಿಳಕರ್ಶ್ಶರಣಾಗತ ವಜ್ರಪಂಜರರ್ ಶ್ರೀದಾಶರಥಿ ವಿನಿರ್ಮ್ಮಿತ ಮಹಾಗ್ರಾಮಂ ಶ್ರೀಲೊಕ್ಕಿಗುಣ್ಡಿಯೂರೊಡೆಯ ಪ್ರಮುಖ ಮಹಾಜನ ಸಾಸಿರ್ವ್ವರ ಕೆಯ್ಯೊಳ್....

—B. K. Vol. I. P. 42

ಇಂಥ ಮಹಾಜನರ ಆಡಳಿತವು ಲೋಕಹಿತವನ್ನು ಸಾಧಿಸುವಲ್ಲಿ ದಕ್ಷವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಪ್ರಕೃತ, ಗ್ರಾಮದಾಡಳಿತವಾಗಲಿ, ರಾಜನ ರಾಜ್ಯ ಪದ್ಧತಿಯಾಗಲಿ ಎಲ್ಲವೂ ವೈದಿಕ ಮತ್ತು ಧರ್ಮಶಾಸ್ತ್ರಗಳ ನಿಯಮಗಳ ಮೇಲೆ ನಿಂತಿತ್ತೆಂದೂ ಈ ವೈಶಿಷ್ಟ್ಯವು ಕರ್ನಾಟಕದ ಶಾಸನಗಳಿಂದ ಸ್ಪಷ್ಟವಾಗುವಷ್ಟು ಬೇರೆ ಎಲ್ಲಿಯೂ ಒಡೆದು ಕಾಣುವದಿಲ್ಲವೆಂದೂ ತಿಳಿಯಬಹುದು. ಇದರಿಂದ ಭಾರತ ದೇಶದ ರಾಜ್ಯಪದ್ಧತಿಯಾಗಲಿ ಜನಜೀವನವಾಗಲಿ ವೈದಿಕ ಧರ್ಮಶಾಸ್ತ್ರಗಳ ನಿರ್ಬಂಧಗಳಿಗೊಳಪಟ್ಟಿದ್ದವೆಂದೂ ಆಯಾಯ ರಾಜರ ಸ್ವತಂತ್ರ ಮನೀಷೆಗೆ ಅಥವಾ ಉಚ್ಛೃಂಖಲ ವೃತ್ತಿಗೆ ಎಳ್ಳಷ್ಟೂ ಆಸ್ಪದವಿದ್ದಿಲ್ಲವೆಂದೂ ಗೊತ್ತಾಗುವದು. ಕರ್ನಾಟಕದ ಶಾಸನಗಳು ಈ ಮಾತನ್ನು ಎತ್ತಿ ಹಿಡಿಯುತ್ತವೆ. ತಮಿಳು ಶಾಸನಗಳಲ್ಲಿ ಮಹಾಜನ ಮುಂತಾದ ಸಂಸ್ಥೆಗಳು ಬೇರೆ ಹೆಸರಿನಿಂದ ಬರುತ್ತವೆ:—

ಕನ್ನಡತೆ–ಲಗು : ಮಹಾ ಜನರು=ಪೆರುಮಕ್ಕಳ್ (ತಮಿಳು)
,, ಸಮುದಾಯ=ಸಭೈ,ಪೆರಂಕುರಿ–ಕೊಟ್ಟಿ (ಗೋಷ್ಠಿ) (ತಮಿಳು)
,, ಗ್ರಾಮ, ನಕರ=ಊರ್, ನಗರ (ತಮಿಳು)
,, ಮಹಾನಾಡು=ಪೆರಿಯನಾಟು ,,

ಈ ರೀತಿಯಾಗಿ ರಾಜ್ಯವಿಭಾಗಗಳಲ್ಲಿಯೂ ಆಡಳಿತದ ಕ್ರಮದಲ್ಲಿಯೂ ತೆಲಗು, ಕನ್ನಡ, ತಮಿಳು ದೇಶಗಳಲ್ಲಿ ಏಕರೂಪತೆ ಕಂಡುಬರುತ್ತದೆ. ಇದು ವೈದಿಕ ಪರಂಪರೆಯನ್ನು ಒಳ್ಳೆಯ ದಕ್ಷತೆಯಿಂದ ಕಾದುಕೊಂಡು ಬಂದಿದೆಯೆಂದು ಮೇಲೆ ತೋರಿಸಿದ್ದೇವೆ.

೩ ಕರ್ನಾಟಕದ ಶಾಸನಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅಲ್ಲಿ ಕೊಡಲ್ಪಟ್ಟ ಗ್ರಾಮಸಂಖ್ಯೆಯಲ್ಲದೆ ಅಗ್ರಹಾರದ ವಿಪ್ರರ ಸಂಖ್ಯೆಯನ್ನು ಕೊಡುವದು.

ದಕ್ಷಿಣಾಪಥದಲ್ಲಿ ವೇದವೇದಾಂಗಗಳನ್ನು ಅಭ್ಯಸಿಸಿ ವಖ್ಯಾಣಿಸುವ ಶಾಸ್ತ್ರಜ್ಞ ಬ್ರಾಹ್ಮಣರ ತಂಡಗಳು ಅಸಂಖ್ಯವಾಗಿದ್ದವು. ಅವರಿಂದ ವೇದ ವಿದ್ಯೆಯೂ ತತ್ವಜ್ಞಾನವೂ ಬಾಳಿ ಉನ್ನತ ಶಿಖರಕ್ಕೆ ಏರಿದ್ದವು. ೧೨ ನೆಯ ಶತಮಾನದ ಜಟಾವರ್ಮ ಕುಲಶೇಖರನ ತಿರುಪ್ಪುವನಂ ತಾಮ್ರ ಶಾಸನದಲ್ಲಿ ರಾಜಗಂಭೀರ ಚತುರ್ವೇದಿ ಮಂಗಲವೆಂಬ ೧೦೮೦ ಬ್ರಾಹ್ಮಣರ ೧೦ ಮೈಲು ವಿಸ್ತಾರವಾದ ಅಗ್ರಹಾರವಿತ್ತೆಂದೂ ಅದೇ ದಕ್ಷಿಣದಲ್ಲಿ ಎಲ್ಲಕ್ಕೂ ದೊಡ್ಡದಾದ ಬ್ರಾಹ್ಮಣ ಅಗ್ರಹಾರವೆಂದೂ ಗೊತ್ತಾಗಿತ್ತು. ಆದರೆ ಬಾದಾಮಿಯು ಅದಕ್ಕೂ ದೊಡ್ಡದಾದ ಅಗ್ರಹಾರವಾಗಿತ್ತೆಂದೂ ಚತುರ್ವೇದ ಪಾರಗರಪ್ಪ ಬ್ರಾಹ್ಮಣರ ಬೀಡಾಗಿತ್ತೆಂದೂ

೧ ಸ್ವಸ್ತಿ ವಿಜಯವಾತಾಪ್ಯಧಿಷ್ಠಾನದಾ **ಶ್ರೀಮಹಾಚಾ-**
೨ **ತುರ್ವಿದ್ಯ ಸಮುದಯಮಿಚ್ಛಾರ್ಸಸ್ವರುಂ....**

ಎಂಬ ಅಲ್ಲಿಯ ಶಾಸನದಿಂದ ಗೊತ್ತಾಗುತ್ತದೆ. ತಮಿಳು ದೇಶದ ೧೦ ಮೈಲು ವಿಸ್ತಾರವಾದ ರಾಜಗಂಭೀರ ಚತುರ್ವೇದಿ ಮಂಗಲವು ೧೦೮೦ ಬ್ರಾಹ್ಮಣರ ಅಗ್ರಹಾರವಾಗಿದ್ದರೆ, ೨೦೦೦ ಚಾತುರ್ವಿದ್ಯ ಸಮುದಯ (=ಮಹಾಜನ ಬ್ರಾಹ್ಮಣರು) ವುಳ್ಳ ವಾತಾಪಿಯ ವಿಸ್ತಾರವು ಎಷ್ಟು ದೊಡ್ಡ

ದಾಗಿರಬೇಕೆಂಬುದನ್ನು ಊಹಿಸಬಹುದು. ಇಂಥ ಅಗ್ರಹಾರಗಳ ಸಂಖ್ಯೆಯನ್ನು ನೋಡಿದರೆ ವೇದಪಾರಗರಪ್ಪ ಶಿಷ್ಟ ಚಾತುರ್ವಿದ್ಯರ ಬಲವು ಸರ್ವಮಾನ್ಯವಾಗಿ ಅತ್ಯಧಿಕವಾಗಿತ್ತೆಂದೂ ಅದೇ ಕರ್ನಾಟಕದ ಸಂಸ್ಕೃತಿಯ ಬಲವೆಂದೂ ಅಲ್ಲಿಯ ಶಾಸನಗಳ ಅಭ್ಯಾಸದಿಂದ ಒಡೆದು ಕಾಣುತ್ತದೆ.

ಮಹಾಜನರಲ್ಲದೆ ಗ್ರಾಮದ ಸಂಪತ್ತನ್ನು ಹೆಚ್ಚಿಸುವ ನಕರಗಳೂ ಊರಿನ ಪ್ರಮುಖಸಂಘಗಳಾಗಿದ್ದವು. ಅವುಗಳಲ್ಲಿ **ಅಯ್ಯಾವೊಳೆಯುಯ್ಯೂರ್ಬ್ಬರ್ಸ್ವಾಮಿಗಳು** ಮುಖ್ಯ. "ಎರಡುಱುನೂಱುಱೆಂಟುಂ ಪಟ್ಟಣದ ಸೆಟ್ಟಿಗುತ್ತರುಂ, ಸ್ಥಳ ಸಮಸ್ತಮುಂಮುರಿದಂಡಂಗಳುಂ ಮೂಱುಸಾಸಿರದ ನಾಲ್ಕುಂ ಪಟ್ಟಣದ ಸೆಟ್ಟಿಗುತ್ತರುಂ ಸಮಸ್ತವುಭಯ ನಾನಾದೇಶಿಗಳುಂ, ಬಿರುದರುಂ, ಬೀರವಣಿಗರುಂ ಗವಱೆಗಳುಂ ಗಾತ್ರಿಗರುವಯ್ವತ್ತೊಕ್ಕಲುಂ ಸಮಸ್ತ ನಖರಂಗಳುಂ ಹಿರಿಸಿಂಗಿಯಲು...." ಎಂದು ಸಿರಸಂಗಿಯ ಶಾಸನದಲ್ಲಿ ಉಕ್ತರಾಗಿದ್ದಾರೆ. ಮುನವಳ್ಳಿಯ ಶಾಸನದಲ್ಲಿ "ಮುದ್ರಾಧಿಕಾರಿಯರಸುಗಳುಂ ಸಮೆಯ ಚಕ್ರವರ್ತ್ತಿ ಅಯಿನೂರ್ವ್ವರುಂ ಸಾಸಿರ್ವ್ವರುಂ ನಾಲ್ಕುಪಟ್ಟಣಂಗಳುಂ ಯೇಳುವರೆ....ವುಭಯ ನಾನಾದೇಶಿಗಳು" ನಿರ್ದೇಶಿಸಲ್ಪಟ್ಟಿದ್ದಾರೆ. ಈ ರೀತಿಯ ವ್ಯಾಪಾರದ ಸಂಘಗಳ ವರ್ಣನೆಯು ಕರ್ನಾಟಕದ ಶಾಸನಗಳಲ್ಲಿ ಒರುವಂತೆ ಬೇರೆ ಶಾಸನಗಳಲ್ಲಿ ಬರುವದಿಲ್ಲ. ದಕ್ಷಿಣದೇಶದ ಎಲ್ಲ ವ್ಯಾಪಾರದ ಪಡಿಮೂಲಿ ಕರ್ನಾಟಕವಾಗಿತ್ತೆಂದೂ ಉಳಿದ ವ್ಯಾಪಾರ ಸಂಘಗಳು ಅಯ್ಯಾವೊಳೆಯುಯ್ಯೂರ್ವ್ವರ ಆಜ್ಞೆಗೆ ಒಳಪಟ್ಟಿದ್ದವೆಂದೂ ಗೊತ್ತಾಗುತ್ತದೆ. ನಗರೇಶ್ವರ, ನಖರೇಶ್ವರ, ನಗರಜಿನಾಲಯ ಎಂಬ ಹೆಸರಿನ ಸಂಸ್ಥೆಗಳು ನಕರ (Artisans) ಗಳಿಂದ ಕಟ್ಟಿಸಲ್ಪಟ್ಟವು. ಈ ನಗರ ಅಥವಾ ನಖರಗಳಿಗೆ ಮಹಾಜನರಿಗಿದ್ದಂತೆ ವ್ಯಾಪಾರದಲ್ಲಿ ಸ್ವಾಯತ್ತವಾದ ಅಧಿಕಾರವಿತ್ತು.

ಕರ್ನಾಟಕದ ವೀರಗಲ್ಲುಗಳ ಬಗ್ಗೆ ಮೇಲೆ ಬರೆದಿದ್ದೇವೆ. ಇವಲ್ಲದೆ ವ್ಯಾಪಾರದ ಕೇಂದ್ರಗಳಲ್ಲಿ ಆತ್ಮ ರಕ್ಷಣೆಗಾಗಿ ಮಹಾಜನರ ಸಹಾಯಕ್ಕಾಗಿ ವೀರಭಟರ ತಂಡವಿರುತ್ತಿತ್ತು. ತಿಳಿವಳ್ಳಿಯು ವ್ಯಾಪಾರದ ಠಾಣೆಯವಾಗಿತ್ತು. ಅಲ್ಲಿ ಸಾಸಿರ ಮಹಾಜನರ ವಶದಲ್ಲಿ 'ಸಮಸ್ತ ಗುಣಸಂಪನ್ನರ್ನುಡಿದು ಮತ್ತೆನ್ನರೊಡಗೆಱೆ ಮಲ್ಲರ ಸಮಪರಾಕ್ರಮರ್ **ಸಾಸಿರ್ವ್ವರ ಗನ್ಧವಾರ**

ಣಂಗಳಪ್ಪ ಬಂಟಿ ಸಾಸಿರ್ವರ್ನನ್ನೆರೆದು ಎಂದು **ಬಂಟಿ ಸಾಸಿರ್ವರ್ನರು** ಇದ್ದ ಉಲ್ಲೇಖವಿದೆ. ಇದಲ್ಲದೆ ದತ್ತಿಯ ರಕ್ಷಣೆಯನ್ನು ಕೋರುವಾಗ ' ಪದಿನಱು ವರುಂ ಪದಿನೆಣ್ಬರು ಕಾಯ್ವರ್ ' ಎಂದು ಬರುವದು. ಇಂಥ ಸಂಘಗಳ ಘಟನೆ, ಅಧಿಕಾರ, ವ್ಯಾಪ್ತಿ ಮುಂತಾದವುಗಳನ್ನು ಕುರಿತು ಸಂಶೋಧ ನಡ ಸುವದು ಅತ್ಯವಶ್ಯವಿದೆ.

ಅಂತು ಕರ್ನಾಟಕದ ಶಾಸನಗಳು ಎಷ್ಟು ಬಗೆಯಿಂದ ಇತಿಹಾಸ ರಚ ನೆಗೆ ಮಹತ್ವದ ವಿವರಗಳನ್ನು ಪೂರೈಸುವವೆಂಬ ವಿಷಯವನ್ನು ಮೇಲಿನ ವಿವರಣೆಯಲ್ಲಿ ಸಂಕ್ಷೇಪವಾಗಿ ತಿಳಿಸಿದ್ದೇವೆ. ಈ ದಿಶೆಯಲ್ಲಿ ಹೆಚ್ಚಿನ ಸಂಗತಿ ಗಳನ್ನು ಆಯ್ದುಕೊಂಡು ಭಾರತ ಭೂಮಿಯ ವೈದಿಕ ಸಂಸ್ಕೃತಿಗೆ ಯಾವ ರೀತಿಯಿಂದ ಪೋಷಣೆಯುಂಟಾಗಿದೆಯೆಂಬುದನ್ನು ಗೊತ್ತುಮಾಡಿಕೊಳ ಬಹುದು.

ಪರಿಶಿಷ್ಟ ೧

ಕರ್ನಾಟಕದ ರಾಜಕೀಯ ಚರಿತ್ರೆಯ ಕೈಗನ್ನಡಿ

ಮೇಲೆ ಹೇಳಿದಂತೆ ಶಾಸನಗಳ ಆಧಾರದಿಂದ ಕರ್ನಾಟಕದ ರಾಜಕೀಯ ಚರಿತ್ರೆಯು ವಿವರಗಳಿಂದ ತುಂಬಿದ ಸಂಗತಿಯು ಗೊತ್ತಾಗುತ್ತದೆ. ಕರ್ನಾಟಕದಲ್ಲಿ ಆಳಿದ ರಾಜರು ಅವರ ರಾಜ್ಯಚಿಹ್ನ, ರಾಜಧಾನಿ, ರಾಜ್ಯ ವಿಸ್ತಾರ, ಇವುಗಳು ಶಾಸನಗಳ ಅಭ್ಯಾಸದಿಂದಲೇ ಬಯಲಿಗೆ ಬಂದಿವೆ. ಶಾಸನಗಳ ಅಭ್ಯಾಸಕ್ಕೆ ಈ ಐತಿಹಾಸಿಕ ವಿವರಗಳ ಜ್ಞಾನದ ಜೋಡು ಇದ್ದರೆ ನಾವು ಕೈಕೊಳ್ಳುವ ಸಂಶೋಧನದಲ್ಲಿ ತಪ್ಪು ತಡೆಗಳಾಗುವ ಸಂಭವ ಕಡಮೆ. ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ವಿವರಗಳ ಪರಿಜ್ಞಾನವು ಅತ್ಯವಶ್ಯವಾದದ್ದು. ಆದ್ದರಿಂದ ಕೆಳಗಿನ ಸಂಕ್ಷಿಪ್ತ ವಿವರಣೆಯಲ್ಲಿ ಈ ವಿಷಯವನ್ನು ತಿಳಿಸಿದ್ದೇವೆ:—

೧ ಮೌರ್ಯರು:— ಕರ್ನಾಟಕದಲ್ಲಿ ಅಶೋಕ ಚಕ್ರವರ್ತಿಯ ಶಾಸನಗಳು ಸಿಕ್ಕುತ್ತವೆ. 'ಮೊರೇರಂಗಡಿ' 'ಮೋರೇರ ಮನೆ' ಇತ್ಯಾದಿ ಅವಶೇಷಗಳು ಕರ್ನಾಟಕದಲ್ಲಿ ಮೌರ್ಯರು ವಾಸವಾಗಿದ್ದರೆಂದು ಸೂಚಿಸುತ್ತವೆ. ಕಾಲ ಕ್ರಿ. ಶ. ಪೂ. ೩ನೆಯ ಶತಮಾನ.

ರಾಜ್ಯಚಿಹ್ನ—ಬುದ್ಧ ಚಕ್ರ,

ರಾಜಧಾನಿ—ಪಾಟಲೀಪುತ್ರ (ಉತ್ತರ ಹಿಂ.) ಕನಕಗಿರಿ, ಇಸಿಲಾ (ಕರ್ನಾಟಕ).

೨ ಆಂಧ್ರರು ಕ್ರಿ. ಶ. ಪೂ. ೩ನೆಯ ಶತಮಾನದಿಂದ ಕ್ರಿ. ಶ. ೩ನೆಯ ಶತಮಾನದ ವರೆಗೆ.

ರಾಜ್ಯಚಿಹ್ನ:—ಚೈತ್ಯವಿಹಾರ, ಧನುರ್ಬಾಣ

ರಾಜಧಾನಿ:—ಪ್ರತಿಷ್ಠಾನ (ಪೈಠಣ), ಅಮರಾವತೀ

(ಅ) ಮಾಂಡಲಿಕರು : ಚಟುಕುಲದ ಸಾಮಂತರು, ರಾಜಧಾನಿ ವೈಜಯಂತೀ, ಬೌದ್ಧಮತಾವಲಂಬಿಗಳು.

೩ ಕದಂಬರು : ಕ್ರಿ. ಶ. ೪ನೆಯ ಶತಮಾನದಿಂದ ೬ನೆಯ ಶತಮಾನದ ವರೆಗೆ; ರಾಜಧಾನಿ ವೈಜಯಂತೀ, ಪಲಾಸಿಕಾ, ತ್ರಿಪರ್ವತ, ಉಚ್ಚಶೃಂಗಿ. ಇವರು ವಿಜಾಪುರ, ಶ್ರೀಶೈಲ, ಹಾಸನ (ಮೈಸೂರು) ಮತ್ತು ಸಮುದ್ರ ಇವುಗಳ ಮಧ್ಯರಾಜ್ಯದಲ್ಲಿ ಆಳುತ್ತಿದ್ದರು. ಸಿಂಹಲಾಂಛನರು.

೪ ಚಲುಕ್ಯರು : ಕ್ರಿ. ಶ. ೬ ರಿಂದ ೮ನೆಯ ಶತಕದವರೆಗೆ; ರಾಜಧಾನಿ ವಾತಾಪಿ (ಬಾದಾಮಿ), ಆನಂದಪುರ (ನಾಸಿಕದ ಹತ್ತರ); ವರಾಹಲಾಂಛನರು.

ತಾಪಿ-ನರ್ಮದಾನದಿ, ಸಮುದ್ರ, ಗುಂಟೂರು ನೆಲ್ಲೂರು ಜಿಲ್ಹೆಗಳು ಪಲ್ಲವರ ಕಂಚಿ ಇವುಗಳ ಮಧ್ಯದಲ್ಲಿ ವಿಸ್ತಾರವಾದ ರಾಜ್ಯವನ್ನು ಆಳುತ್ತಿದ್ದರು.

೫ ರಾಷ್ಟ್ರಕೂಟರು : ಕ್ರಿ. ಶ. ೮ ರಿಂದ ೧೦ನೆಯ ಶತಕದವರೆಗೆ; ಗರುಡ ಲಾಂಛನರು. ರಾಜಧಾನಿ : ಮಯೂರಖಂಡಿ, ಪ್ರತಿಷ್ಠಾನಗರ, ಮಾನ್ಯಖೇಟ. ಚಲುಕ್ಯರ ರಾಜ್ಯದಲ್ಲಿ ಪೂರ್ವದ ಭಾಗವಾದ ಗುಂಟೂರು ನೆಲ್ಲೂರು ಭಾಗಗಳನ್ನು ಬಿಟ್ಟು ಉಳಿದ ಸಪ್ತಾರ್ಧಲಕ್ಷ ರಾಜ್ಯಕ್ಕೆ ಅಧಿಪತಿಗಳಾಗಿದ್ದರು.

೬ ತಳಕಾಡಿನಗಂಗರು : ಕ್ರಿ. ಶ. ೪ರಿಂದ ೧೦ನೆಯ ಶತಕದವರೆಗೆ. ರಾಜಚಿಹ್ನ: ಆನೆ. ರಾಜಧಾನಿ ಕುವಳಾಲ (ಕೋಲಾರ), ತಳಕಾಡು, ಮಣ್ಣೆ. ಇವರು ಗಂಗವಾಡಿ—೯೬೦೦೦ ಪ್ರಾಂತದ ಅಧಿಪತಿಗಳು. ಅನಂತಪುರ, ಕೋಲಾರ ಜಿಲ್ಹೆಗಳಲ್ಲಿ ಆರಂಭಿಸಿ ಇಡಿಯ ಮೈಸೂರು—ಕೊಡಗು ರಾಜ್ಯಗಳನ್ನು ಆಕ್ರಮಿಸಿದರು.

೭ ಕಲ್ಯಾಣಿಯ ಚಾಳುಕ್ಯರು :— ಕ್ರಿ. ಶ. ೧೦ರಿಂದ ೧೨ನೆಯ ಶತಕದ ವರೆಗೆ. ರಾಜಚಿಹ್ನ—ವರಾಹ; ರಾಜಧಾನಿ : ಪೊಟ್ಟಳಕೆರೆ, ಕೊಲ್ಲಿಪಾಕೆ, ಜಯನ್ತೀಪುರ, ಕಲ್ಯಾಣ. ಇವಲ್ಲದೆ ಅನೇಕ ನೆಲೆವೀಡುಗಳೂ ಅಪ್ಪಯಣವೀಡುಗಳೂ ಇದ್ದವು. ರಾಷ್ಟ್ರಕೂಟರ ಸಪ್ತಾರ್ಧ ಲಕ್ಷವನ್ನು ಆಕ್ರಮಿಸಿ ಪೂರ್ವ ದಕ್ಷಿಣಗಳಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಇವರ ದೇಶಕ್ಕೆ ಕುಂತಲ ವಿಷಯವೆಂಬ ಹೆಸರು ಬಂತು.

೮ ಕಳಚುರ್ಯ : ಕ್ರಿ. ಶ. ೧೨ನೆಯ ಶತಕ. ರಾಜಚಿಹ್ನ ವೃಷಭ, ರಾಜಧಾನಿ ಮಂಗಳವಾಡ, ಕಲ್ಯಾಣ. ಮೇಲೆ ಹೇಳಿದ ಚಾಳುಕ್ಯ ರಾಜ್ಯಕ್ಕೊಡೆಯರಾಗಿದ್ದರು.

೯ ಯಾದವ : ಕ್ರಿ. ಶ. ೧೨ರಿಂದ ೧೪ನೆಯ ಶತಕ. ರಾಜಚಿಹ್ನೆ ಗರುಡ, ರಾಜಧಾನಿ : ದೇವಗಿರಿ (ಈಗಿನ ದೌಲತಾಬಾದ) ಕೃಷ್ಣಾ (ಒಮ್ಮೊಮ್ಮೆ ತುಂಗಭದ್ರಾ) ನದಿಯ ಉತ್ತರಕ್ಕಿದ್ದ ಚಾಳುಕ್ಯರ ರಾಜ್ಯಕ್ಕೆ ಅಧಿಪತಿಗಳಾಗಿದ್ದರು.

೧೦ ಹೊಯ್ಸಳ : ಕ್ರಿ. ಶ. ೧೨ ರಿಂದ ೧೪ನೆಯ ಶತಕ. ರಾಜಚಿಹ್ನೆ ಆನೆ, ಮತ್ತು ಸಳನು ಹುಲಿಯನ್ನು ಕೊಲ್ಲುವ ಚಿತ್ರ. ರಾಜಧಾನಿ : ದೋರ ಸಮುದ್ರ. ಕಣ್ಣನೂರು (ವಿಕ್ರಮಪುರ) ದಕ್ಷಿಣದಲ್ಲಿ, ಇವರು ದಕ್ಷಿಣದಲ್ಲಿ ಕೃಷ್ಣಾ ಅಥವಾ ತುಂಗಭದ್ರಾ ನದಿಯ ದಕ್ಷಿಣಕ್ಕಿದ್ದ ಚಾಳುಕ್ಯ ರಾಜ್ಯಕ್ಕೆ ಅಧಿಪತಿಗಳಾಗಿದ್ದರು. ರಾಜ್ಯವಿಸ್ತಾರ—ಆಕ್ರಮಣಗಳ ವಿಷಯದಲ್ಲಿ ಹೊಯ್ಸಳ-ಯಾದವರ ನಡುವೆ ಮೇಲಿಂದ ಮೇಲೆ ಹೋರಾಟಗಳಾಗುತ್ತಿದ್ದವು.

೧೧ ವಿಜಯನಗರದ ರಾಜಮನೆತನಗಳು. ಕ್ರಿ. ಶ. ೧೪ ರಿಂದ ೧೬ನೆಯ ಶತಕದವರೆಗೆ. (೧) ಸಂಗಮ, (೨) ಸಾಳ್ವ, (೩) ತುಳುವ, (೪) ಆರುವೀಡು. ರಾಜಚಿಹ್ನೆ: ವರಾಹ, ಆನೆ, ದುರ್ಗಾ. ಇವರ ನಾಣ್ಯಗಳ ಮೇಲೆ ಬೇರೆ ಬೇರೆ ಚಿಹ್ನಗಳು ಸಿಗುತ್ತವೆ. ರಾಜಧಾನಿ ಹಂಪಿ—ಹಸ್ತಿನಾವತಿ, ಪೆನುಗೊಂಡೆ, ಚಂದ್ರಗಿರಿ, ಮುಖ್ಯ ಪಟ್ಟಣಗಳು. ಇವರು ಪೂರ್ವ-ದಕ್ಷಿಣ ಪಶ್ಚಿಮ ಸಮುದ್ರಾಧಿಪತಿಗಳೆಂದು ಹೆಸರಾಗಿದ್ದರು. ತೆಲಗು-ತಮಿಳು ದೇಶದ ರಾಜರು ಇವರ ಅಂಕಿತಕ್ಕೆ ಒಳಗಾಗಿದ್ದರು. ನಡುವೆ ಮುಸಲ್ಮಾನ ಅರಸರ ಚಿಕ್ಕಪುಟ್ಟ ಅರಸೊತ್ತಿಗೆಗಳು ಸ್ವತಂತ್ರವಾಗಿ ಇದ್ದುವು. ಕ್ರಿ. ಶ. ೧೫೬೫ ರಲ್ಲಿ ರಕ್ಕಸತಂಗಡಿಗೆಯ ಕಾಳೆಗದಲ್ಲಿ ಮುಸಲ್ಮಾನರ ಆಕ್ರಮಣಕ್ಕೆ ತುತ್ತಾಗಿ ವಿಜಯನಗರವು ಹಾಳಾಯಿತು.

೧೨ ಕ್ರಿ. ಶ. ೧೬-೧೭ನೆಯ ಶತಕದಲ್ಲಿ ಅರಾಜಕತೆಯ ಚಿಹ್ನಗಳು ಬಲಿಯ ಹತ್ತಿದ್ದವು. ಹಿಂದೂ ಧರ್ಮವು ಗಂಡಾಂತರದಲ್ಲಿದ್ದಾಗ, ರಾಮದಾಸರ ಪ್ರಭಾವದಲ್ಲಿ ಶಿವಾಜಿ ಮಹಾರಾಜನು ವೈದಿಕ ಧರ್ಮ ಪ್ರತಿಷ್ಠಾಪನಾಚಾರ್ಯನೆಂದು ಹೆಸರಾಗಿ ಮುಸಲ್ಮಾನರನ್ನು ಚದರಿಸಿ ಹೊಸದೊಂದು ರಾಜ್ಯವನ್ನು ಸ್ಥಾಪಿಸಿದನು. ರಾಜಚಿಹ್ನ ರಾಮದಾಸನ ಕ್ಯಾವಿನಿಶಾನಿ (ಝೇಂಡಾ ಭಗವಾ).

ದಕ್ಷಿಣದಲ್ಲಿ ಮೈಸೂರರಸರು ವಿಜಯನಗರದ ರಾಜ್ಯ ಪರಂಪರೆಯನ್ನು ಉಜ್ಜೀವ ಗೊಳಿಸಿದರು. ರಾಜಚಿಹ್ನ ಗಂಡ ಭೇರುಂಡ.

ಪರಿಶಿಷ್ಟ ೨

ಮೇಲೆ ೧೩ನೆಯ ಪುಟದಲ್ಲಿ ವಿಜಯನಗರದ ಶಾಸನಗಳ ಒಕ್ಕಣಿಕೆಯನ್ನು ಪ್ರತ್ಯೇಕವಾಗಿ ಕೊಡುತ್ತೇವೆಂದು ಹೇಳಿದ್ದೇವೆ. ಅದನ್ನು ಇಲ್ಲಿ ಕೊಟ್ಟಿದ್ದೇವೆ:—

"ಶುಭಮಸ್ತು । ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಅರಿರಾಯ ವಿಭಾಡ ಭಾಷೆಗೆ ತಪ್ಪುವರಾಯರ ಗಂಡ ಮೂರುರಾಯರ ಗಂಡ ಕಂಡನಾಡಕೊಂಡು ಕೊಂಡ ನಾಡ ಕೊಡದ ಪೂರ್ವ ದಕ್ಷಿಣ ಪಶ್ಚಿಮೋತ್ತರ ಚತುಃಸಮುದ್ರಾಧಿಪತಿ ವೀರ ಪ್ರತಾಪ ಕೃಷ್ಣರಾಯ ಮಹಾರಾಯರು ಸ್ತಿರ ರಾಜ್ಯವನಾಳುತ ಇರಲಾಗಿ...."

—S. I. I. Vol. IV, No. 249.

ಕೆಲವು ಶಾಸನಗಳಲ್ಲಿ 'ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರ' ಎಂಬ ಚಾಳುಕ್ಯರ ಪ್ರಶಸ್ತಿಯನ್ನೂ ಬೇರೆಡೆಗಳಲ್ಲಿ 'ಹಿಂದುರಾಯ ಸುರತ್ರಾಣ' ಎಂಬ ವಿಶಿಷ್ಟ ಬಿರುದನ್ನೂ ಈ ರಾಜರಿಗೆ ಹಚ್ಚಿದ್ದು ಕಂಡು ಬರುತ್ತದೆ. ಇದರಿಂದ ವಿಜಯನಗರದ ರಾಯರು ಚಾಳುಕ್ಯರ ವೈದಿಕ ಪರಂಪರೆಯನ್ನು ಕಾದುಕೊಂಡಿದ್ದರೆಂದು ತಿಳಿಯಬಹುದು.

OFFICE OF THE DIRECTOR ...
1224
30 AUG 1969
GOVT. OF MADRAS, MADRAS-

ಶೋಧನ ಪತ್ರಿಕೆ

ಪುಟ	ಸಾಲು	ಅಶುದ್ಧ	ಶುದ್ಧ
೬	೧೪	ದಿಗ್ಗರ್ಶನ	ದಿಗ್ದರ್ಶನ
೭	೪	ಒತಿಹಾಸಿಕ	ಐತಿಹಾಸಿಕ
೮	೨೭	ಯಾಜ್ಞಾ	ಯಾಜ್ಞಾ
,,	೨೮	....	೩ ಹಿರಣ್ಯಗರ್ಭಸಂಭೂತಶ್ಚಲಿಕ್ಯೋ ವಲ್ಲಭೇಶ್ವರಃ
೯	೧	೩ ಅಧಸ್ತಾರು	೪ ಅಧಸ್ತಾದು
೧೦	೬	ಪ್ರವರ್ತ್ತಿಪೆ	ಪ್ರವರ್ತ್ತಿಸೆ
,,	೧೮	ಜಯು	ಜಯ
೧೧	೯	ಪೃಥ್ವೀವಭ	ಪೃಥ್ವೀವಲ್ಲಭ
,,	೧೬	ಕಳಚರ್ಯ	ಕಳಚುರ್ಯ
,,	೧೯	ನಿರ್ಗೋಷಣಂ	ನಿರ್ಗ್ಘೋಷಣಂ
,,	೨೪	ಕಾಲದಲ್ಲಿ	ಕಾಲದ
೧೨	೨೬	ತಮಿಳು	ತಮಿಳು.
೧೩	೨	ತುಳುವ ವೈಷ್ಣವ	ತುಳುವ:— ವೈಷ್ಣವ
೧೪	೨೪	ವೊದಲಿಂದ	ವೊದಲಾದ
೧೫	೬	ಗ್ರಂಧಗಳಲ್ಲಿ	ಗ್ರಂಥಗಳಲ್ಲಿ
೧೯	೨	ಶ್ರೀಮುದಯಾ	ಶ್ರೀಮುದಯ್ಯಾ
೨೪	೧೫	ಶಾಸನಗಳನ್ನು	ಶಾಸನಗಳು
೩೨	೨	ತ್ರಿಂಶಸ್ತು	ತ್ರಿಂಶತ್ಸು

OFFICE OF THE DIR...
30 AUG 1969
GOVT. OF MADRAS, MADRAS-